₹ 5/-

# ನೇಸರು
## ತಿಂಗಳೋಲೆ

PAGES 20

NOVEMBER 2022 | Nesaru Tingalole | Vol. XL - 11









## ಕನ್ನಡ ರಾಜ್ಯೋತ್ಸವದ
## ನಲು ಹಾರೈಕೆಗಳು



ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಮರಾಠಿ ಮಣ್ಣಿನಲ್ಲಿ ಕೋಟಿ ಕಂಠ ಗಾಯನ




ಸರಕಾರ ಕನ್ನಡ ಸಂಸ್ಕೃತಿ ಇಲಾಖೆ ಆಯೋಜಿತ ಕನ್ನಡಿಗರ ಬಳಗ ಮುಂಬಯಿ ಸಂಯೋಜನೆಯಲ್ಲಿ 67ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕನ್ನಡ ರಾಜ್ಯೋತ್ಸವ ಸಂಭ್ರಮವನ್ನು ಕರ್ನಾಟಕದ ಮುಖ್ಯಮಂತ್ರಿ ಶ್ರೀ. ಬಸವರಾಜ ಬೊಮ್ಮಾಯಿ ಮಾರ್ಗದರ್ಶನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಶ್ರೀ. ವಿ. ಸುನೀಲ್ ಕುಮಾರ್ ಅವರ ನೇತೃತ್ವದಲ್ಲಿ ವಿಭಿನ್ನ ಕಾರ್ಯಕ್ರಮ "ನನ್ನ ಹಾಡು – ನನ್ನ ನಾಡು" ಕೋಟಿ ಕಂಠ ಗಾಯನ ಕಾರ್ಯಕ್ರಮ ಅಕ್ಟೋಬರ್ 28ರಂದು ಶುಕ್ರವಾರ ಬೆಳಿಗ್ಗೆ ಮೀರಾ–ಭಾಯಂದರ್ ಪೂರ್ವದ ಮೆವಾರ್ ವಾಟಿಕಾ ಸಭಾಗೃಹದಲ್ಲಿ ಕನ್ನಡಿಗರು ನಾಡ ಗೀತೆಯನ್ನು ತಾಳ ಮೇಳ ಸಂಗೀತದೊಂದಿಗೆ ಹಾಡಿದರು. ಬಳಿಕ ನಡೆದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ





ಪುರಸ್ಕೃತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ನಮ್ಮ ನಾಡು–ನುಡಿಯ ಬೆಳವಣಿಗೆಯಲ್ಲಿ ಮೈಸೂರು ಅಸೋಸಿಯೇಷನ್ ಮುಂಬೈ ನೀಡಿರುವ ಅಮೂಲ್ಯ ಕಾಣಿಕೆಯನ್ನು ಗುರುತಿಸಿ, ಗೌರವಿಸುತ್ತಾ ಸನ್ಮಾನಿಸಲಾಯಿತು. ಅಸೋಸಿಯೇಷನ್ನಿನ ಪರವಾಗಿ ಅಧ್ಯಕ್ಷೆ ಶ್ರೀಮತಿ ಕಮಲಾ ಕಾಂತರಾಜ್ ಅವರ ಅನುಪಸ್ಥಿತಿಯಲ್ಲಿ ಶ್ರೀ ಬಿ. ಕೆ. ಮಧುಸೂದನ್ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

# ಕನ್ನಡ ವಿಭಾಗದ 90ನೆಯ ಕೃತಿ ಸಾರ್ವಭೌಮ : ಐಕಳ ಹರೀಶ ಶೆಟ್ಟಿ ಗೌರವ ಗ್ರಂಥದ ಪರಿಷ್ಕೃತ ಆವೃತ್ತಿ ಮಹಾರಾಷ್ಟ್ರ ಸರಕಾರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನಾವೀಸ್ ಅವರಿಂದ ಲೋಕಾರ್ಪಣೆ

ನಾಡಿನ ಮಹಾನ್ ಸಂಘಟಕ ಐಕಳ ಹರೀಶ ಶೆಟ್ಟಿ ಅವರ ಜೀವನಯಾನವನ್ನು ಬಿಂಬಿಸುವ ಗೌರವ ಗ್ರಂಥ 'ಸಾರ್ವಭೌಮ' ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ 90ನೆಯ ಕೃತಿಯಾಗಿ ಬೆಳಕು ಕಂಡಿದ್ದು ಈ ಗ್ರಂಥದ ಪರಿಷ್ಕೃತ ಆವೃತ್ತಿಯನ್ನು ಮಹಾರಾಷ್ಟ್ರ ಸರಕಾರದ ಮಾನ್ಯ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನಾವೀಸ್ ಅವರು ದಿನಾಂಕ 18ರಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟ ಆಯೋಜಿಸಿರುವ ವಿಶ್ವ ಬಂಟರ ಸಮ್ಮಿಲನ–2022 ಕಾರ್ಯಕ್ರಮದಲ್ಲಿ ಗಣ್ಯಾತಿ ಗಣ್ಯರ ಉಪಸ್ಥಿತಿಯಲ್ಲಿ ಕುರ್ಲಾ ಪೂರ್ವದ ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾ ಭವನದಲ್ಲಿ ಲೋಕಾರ್ಪಣೆ ಗೊಳಿಸಿದರು. ವೇದಿಕೆಯಲ್ಲಿ



ಮುಂಬಯಿಯ ಸಂಸದರಾದ ಶ್ರೀ ಗೋಪಾಲ ಶೆಟ್ಟಿ, ಬಂಟರ ಸಂಘದ ಅಧ್ಯಕ್ಷರಾದ ಚಂದ್ರಹಾಸ ಕೆ .ಶೆಟ್ಟಿ, ಉದ್ಯಮಿ, ಸದಾಶಿವ ಶೆಟ್ಟಿ, ಕೂಳೂರು, ಕನ್ಯಾನ, ಐಕಳ ಹರೀಶ ಶೆಟ್ಟಿ, ಚಂದ್ರಿಕಾ ಹರೀಶ ಶೆಟ್ಟಿ, ಉದ್ಯಮಿ ಆನಂದ ಶೆಟ್ಟಿ, ತೋನ್ಸೆ, ಸಲಹಾ ಮಂಡಳಿಯ ಕರ್ನಿರೆ ವಿಶ್ವನಾಥ ಶೆಟ್ಟಿ, ಜಯಕರ ಶೆಟ್ಟಿ, ಇಂದ್ರಾಳಿ, ಉಳ್ತೂರು ಮೋಹನದಾಸ ಶೆಟ್ಟಿ, ರತ್ನಾಕರ ಶೆಟ್ಟಿ ಮುಂಡ್ಕೂರು, ಡಾ. ಆರ್. ಕೆ. ಶೆಟ್ಟಿ, ಪ್ರವೀಣ್ ಭೋಜ ಶೆಟ್ಟಿ, ಶಶಿಧರ ಕೆ. ಶೆಟ್ಟಿ, ರವೀಂದ್ರನಾಥ ಭಂಡಾರಿ, ಅಶೋಕ ಪಕ್ಕಳ, ಕರ್ನೂರು ಮೋಹನ ರೈ, ಕೊಲ್ಲಾಡಿ ಬಾಲಕೃಷ್ಣ ರೈ ಮೊದಲಾದವರು ಉಪಸ್ಥಿತರಿದ್ದರು. ಕನ್ನಡ ವಿಭಾಗದ ಹೆಮ್ಮೆಯ ಪ್ರಕಟಣೆಗಳಲ್ಲಿ ಒಂದಾಗಿರುವ ಈ ಗ್ರಂಥವನ್ನು ಕರ್ನಾಟಕ ಮಲ್ಲದ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ, ಕನ್ನಡ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಸಂಪಾದಿಸಿಕೊಟ್ಟಿದ್ದಾರೆ.

ಸಂಪಾದಕೀಯ

ನೇಸರು ತಿಂಗಳೋಲೆ

ಸಂಪುಟ 40 ನವೆಂಬರ್–2022 ಸಂಚಿಕೆ 11

# ಆತ್ಮಸ್ಥೈರ್ಯ ರೂಢಿಸಿಕೊಳ್ಳಿ



✍ **ಡಾ. ಜ್ಯೋತಿ ಸತೀಶ್**

ಆತ್ಮಸ್ಥೈರ್ಯ ಮನುಷ್ಯನ ಬದುಕಿನಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಆತ್ಮಸ್ಥೈರ್ಯ ಇಲ್ಲದಿದ್ದರೆ ಮನುಷ್ಯನಿಗೆ ಬದುಕಲು ಸಾಧ್ಯವಿಲ್ಲ. ಇನ್ನು ಕೆಲವ್ರು ಬಂದದ್ದೆಲ್ಲ ಬರಲಿ ಭಗವಂತನ ದಯೆಯೊಂದಿರಲಿ ಎಂದು ನಗು ನಗುತ್ತಾ ಬಾಳುವುದನ್ನು ಕಾಣಬಹುದು. ಆತ್ಮಸ್ಥೈರ್ಯದಿಂದ ನಮ್ಮಲ್ಲಿರುವ ಊನತೆಗಳು ಅಥವಾ ದೌರ್ಬಲ್ಯಗಳು ನಮಗೆ ಗೊತ್ತಿಲ್ಲದಂತೆ ಗೌಣವಾಗಿ ಬಿಡುತ್ತದೆ. ನಮ್ಮ ಮನೋಬಲ ದೃಢವಾಗಿದ್ದರೆ ಎಂತಹ ಕಠಿಣ ಪರಿಸ್ಥಿತಿಯಲ್ಲೂ ನಮ್ಮ ಮನಸ್ಸು ಹಿಂದೆ ಸರಿಯುವುದಿಲ್ಲ.

ದಿನವೂ ಟ್ರೈನಿನಲ್ಲಿ ಪ್ರಯಾಣಿಸುತ್ತಿರುವಾಗ ಒಂದು ಸಿಂಧಿ ಮಹಿಳೆಯನ್ನು ನೋಡುತ್ತಿದ್ದೆ. ಆಕೆ ತಾನು ಇಳಿಯುವ ನಿಲ್ದಾಣ ಬರುವ ತನಕ ತನ್ನ ಜೊತೆಗಿದ್ದವರನ್ನು ನಕ್ಕು ನಗಿಸುತ್ತಿದ್ದಳು. ಮತ್ತು ತಪ್ಪದೇ ಎಲ್ಲರಿಗೂ ತಾನು ತಂದ ಬೆಳಗಿನ ತಿಂಡಿಯನ್ನು ಹಂಚಿ ತಿನ್ನುತ್ತಿದ್ದಳು. ಆಕೆಯ ಮುಖವನ್ನು ನೋಡಿದಾಕ್ಷಣ ನಮಗೇ ಅರಿವಿಲ್ಲದಂತೆ ನಮ್ಮ ಮುಖದಲ್ಲಿ ಮಂದಹಾಸ ಮೂಡುತ್ತದೆ. ಒಂದು ದಿನ ತಿಳಿಯಿತು ಆಕೆಯ ಒಬ್ಬನೇ ಒಬ್ಬ ಮಗ ಅದು ಹತ್ತೊಂಬತ್ತು ವರ್ಷ ಪ್ರಾಯದ ಮಗ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದನು. ಈಗ ಆಕೆಯ ಮನೆಯಲ್ಲಿರುವುದು ಆಕೆ ಮತ್ತು ಆಕೆಯ ಪತಿ. ಆಕೆಯ ಪ್ರಕಾರ ಎಲ್ಲವೂ ಭಗವಂತ ಕೈಯಲ್ಲಿದೆ. ಅವನೇ ಕೊಟ್ಟಿದ್ದು, ಅವನೇ ತೆಗೆದುಕೊಂಡ. ಸ್ವಲ್ಪ ಸಮಯವಾದರೂ ಮಗನನ್ನು ನಮ್ಮೊಂದಿಗೆ ಇರುವ ಭಾಗ್ಯವನ್ನು ಕಲ್ಪಿಸಿದನಲ್ಲ ಅಷ್ಟು ಸಾಕು. ಅವನು ಎಲ್ಲಿಗೂ ಹೋಗಿಲ್ಲ, ನಮ್ಮೊಳಗೆಯೇ ಇದ್ದಾನೆ. ಇನ್ನೊಬ್ಬರ ಮುಖದ ನಗುವಿನಲ್ಲಿ ನಾನು ನನ್ನ ಮಗನ ಮುಖವನ್ನು ಕಾಣುತ್ತೇನೆ ಎಂದು ಹೇಳಿದ ಆಕೆಯ ಮಾತಿನಲ್ಲಿ ಎಂತಹ ಶಕ್ತಿಯಿದೆ! ಒಂದು ಕ್ಷಣ ಆಕೆಯ ವ್ಯಕ್ತಿತ್ವಕ್ಕೆ, ಬದುಕುವ ರೀತಿಗೆ ತಲೆಬಾಗಲೇ ಬೇಕು ಎಂದೆನಿಸಿತು.

ನಮ್ಮ ದೌರ್ಬಲ್ಯಗಳನ್ನೇ ವೈಕಲ್ಯಗಳೆಂದು ಭಾವಿಸುವ ನಾವು ಯಶಸ್ಸಿನೆಡೆಗೆ ದಾಪುಗಾಲಿಡುತ್ತ ಸಾಗುವಾಗ ಎಡವಿ ಬೀಳುವುದು ಸಹಜ. ಅಲ್ಲಿಂದ ಮುಂದೆ ಸಾಗುವ ಪ್ರಯತ್ನ ಮಾಡುವುದೇ ಇಲ್ಲ. ಆದರೆ ತಮ್ಮ ವೈಫಲ್ಯಗಳನ್ನೇ 'ವೈಕಲ್ಯ'ಗಳೆಂದು ಭಾವಿಸದೆ ಸಾಫಲ್ಯತೆಯೆಡೆಗೆ ಹೆಜ್ಜೆ ಹಾಕುತ್ತಿರುವ ಸುಕೋಮಲ ಮನಸ್ಸುಗಳನ್ನು ಈ ಜಗತ್ತು ಕಂಡಿದೆ ಎನ್ನುವುದನ್ನು ನಾವು ಕಡೆಗಣಿಸುವಂತಿಲ್ಲ. ನಮ್ಮಲ್ಲಿ ಎಲ್ಲ ತರಹ ಜೀವನವನ್ನು ನಡೆಸುತ್ತಿರುವವರು ಇದ್ದಾರೆ. ರಾತ್ರಿ ಬೆಳಗಾಗುವುದರೊಳಗೆ ನನಗೆ ಆತ್ಮಸ್ಥೈರ್ಯ ಬರಬೇಕೆಂದು ಬಯಸುವುದು ನಮ್ಮ ಮೂರ್ಖತನವಷ್ಟೇ. ಇನ್ನು ಕೆಲವರಿಗೆ ಆತ್ಮಸ್ಥೈರ್ಯ ಎಂದ ಪದದ ಪರಿಚಯವೇ ಇಲ್ಲವೆಂದರೂ ತಪ್ಪಾಗಲಿಕ್ಕಿಲ್ಲ. ಆತ್ಮಸ್ಥೈರ್ಯವನ್ನು ರೂಢಿಸಿಕೊಳ್ಳಬೇಕೆಂದು ದಿನವಿಡಿ ಅದರ ಬಗ್ಗೆನೇ ಯೋಚಿಸಿದರೂ ಅದು ನಮ್ಮ ಪಾಲಿಗೆ ದಕ್ಕುವುದಿಲ್ಲ. ಬದುಕಿನಲ್ಲಿ ಎದುರಾಗುವ ಸವಾಲುಗಳಿಗೆ ಭಯಪಡದೆ ಧೈರ್ಯದಿಂದ ಎದುರಿಸುತ್ತಾ ಹೋದಂತೆ ನಮ್ಮಲ್ಲಿ ಒಂದು ರೀತಿಯ ಆತ್ಮಸ್ಥೈರ್ಯ ಉದ್ಭವಾಗುತ್ತದೆ. ಹೋದ ಸಲ ಬಂದ ಕಷ್ಟಕಿಂತ ಇದೆಂತ ಮಹಾನ್! ಇದನ್ನು ಎದುರಿಸಿಯೇ ತೀರುತ್ತೇನೆಂಬ ನಮ್ಮ ಛಲ ನಮ್ಮ ಮನದಲ್ಲಿ ಮೂಡುತ್ತದೆ. ಒಪ್ಪಿಸಿದ ಕೆಲಸವನ್ನು ಹಾಗೋ ಹೀಗೋ ಮುಗಿಸಿಬಿಡುವಂತಹದ್ದನ್ನು ನಾವು ಬಹಳಷ್ಟು ಮಂದಿ ರೂಡಿಸಿಕೊಂಡು ಬಿಟ್ಟಿದ್ದೇವೆ. ಆದರೆ ನಿರ್ದಿಷ್ಟವಾಗಿ ಈ ಕೆಲಸವನ್ನೇ ಮಾಡುತ್ತೇನೆ, ಇದನ್ನು ಮಾಡಲು ನಾನೇ ಯೋಗ್ಯವಾದ ವ್ಯಕ್ತಿಯೆಂದು ವಿಶ್ವಾಸವಿಟ್ಟು ಒಂದು ನಿರ್ದಿಷ್ಟ ಸಮಯದಲ್ಲಿ ಅದನ್ನು ಅಚ್ಚುಕಟ್ಟಾಗಿ ಮುಗಿಸಲು ಅಗತ್ಯವಿರುವ ಅಂಶವೇ ಆತ್ಮಸ್ಥೈರ್ಯ. ಇದು ನಮ್ಮ ಬದುಕಿನ ಅವಿಭಾಜ್ಯ ಅಂಗವೆಂದು ಪರಿಗಣಿಸಿ ಆತ್ಮಸ್ಥೈರ್ಯದಿಂದೊಡಗೂಡಿದ ಪ್ರಯತ್ನದಲ್ಲಿ ತೊಡಗಿಸಿಕೊಂಡಾಗ ಮಾತ್ರ ನಮಗೆ ಯಶಸ್ಸು ಸಿಗಲು ಸಾಧ್ಯ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

\- Ed.

****

ಸಂಪರ್ಕ ವಿಳಾಸ:

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
☎ 24037065
Email:
Mysoreassociation.mumbai@gmail.com
Website:
www.mysoreassociation.in

ಅಕ್ಟೋಬರ್ ಸಂಚಿಕೆಯಿಂದ

# ಹೀಗಿತ್ತು ಮಲೆನಾಡು



✍ ಜಿ.ವಿ.ನವಿಲೇಕರ್

(ಈ ದೀರ್ಘ ಲೇಖನವು ಕೊಳವಳ್ಳಿ ಪ್ರಕಾಶನ ಪ್ರಕಟಿಸಿರುವ "ನನ್ನೊಳಗಿನ ಮಲೆನಾಡು "ಪುಸ್ತಕದಲ್ಲಿ ಪ್ರಕಟವಾಗಿದೆ)

**ಜಾನುವಾರು ಸಂಬಂಧಿತ ರೋಗಗಳು ಮತ್ತು ಪರಿಹಾರ:** ಮುರುವಿನ ಒಲೆ ವಿವರಣೆಯಲ್ಲಿ ಜಾನುವಾರುಗಳ ವಿಷಯ ಬಂದಿರುವುದರಿಂದ ಈ ಸಂಬಂಧ ಈ ಕೆಳಗಿನ ವಿವರಣೆ. ಜಾನುವಾರುಗಳಿಗೆ ಈಗಿನಂತೆ ಹೊಸ ಹೊಸ ನಮೂನೆಯ ರೋಗಗಳಿರಲಿಲ್ಲ ಮತ್ತು ಔಷಧಿಗಳಾಗಲೀ ಜಾನುವಾರು ಡಾಕ್ಟರುಗಳಾಗಲೀ ಇರಲಿಲ್ಲ. ಜೋರು ಮಳೆಗಾಲದಲ್ಲಿ ಥಂಡಿಯಿಂದ ದನಕರುಗಳಿಗೆ ಗಂಟಲು ನೋವಾಗಿ ಮೇವು ತಿನ್ನಲಾಗದೇ ತೊಂದರೆ ಪಡುತ್ತಿದ್ದವು. ಈ ಖಾಯಿಲೆಗೆ 'ಕಪ್ಪ" ಎನ್ನುತ್ತಿದ್ದರು. ಗ್ರಾಮೀಣ ಔಷಧಗಳಾಗಿದ್ದ ಕಂಚಿಕಾಯಿ (ಹೇರಳೆಕಾಯಿ), ಮೆಣಸಿನಕಾಳಿನ ಖಾರ, ಉಪ್ಪು, ಭತ್ತ ಮುಂತಾಗಿ ಹಳ್ಳಿ ಔಷಧಗಳನ್ನೇ ಮಾಡುತ್ತಾ ನಮ್ಮ ಪೂರ್ವಿಕರು ಕಾಲಾಯಾಪನೆ ಮಾಡಿದರು.

ಕೆಲವು ಸಲ ಜಾನುವಾರುಗಳಿಗೆ ಜ್ವರ ಸಹಾ ಬಂದು (ಜ್ವರ ಬರುತ್ತೆ ಎಂದು ಗೊತ್ತಾದದ್ದು ಈಚೆಗೆ), ಕಾಲು ಗೊರಸುಗಳ ಸಂದಿ ಒಡೆಯುವುದರ ಜೊತೆಗೆ ಬಾಯಿ ಪೂರಾ ಕರಗಿ ಮೇವು ತಿನ್ನಲಾಗುವುದಿಲ್ಲ. ಹೀಗಾದಾಗ ರಾಗಿ ಹಿಟ್ಟು, ಅಕ್ಕಿ ಗಂಜಿ ಸೇರಿಸಿ ಜಾನುವಾರುಗಳಿಗೆ ಗೊಟ್ಟದ ಮೂಲಕ ಬಾಯಿ ಕಳೆಸಿ (ತೆರೆಸಿ) ಹೊಯ್ಯಬೇಕಾಗುತ್ತದೆ. ಗೊಟ್ಟವೆಂದರೆ ಗೊತ್ತಿಲ್ಲದವರೂ ಈಗ ಇದ್ದು ವಿವರಿಸಬೇಕಾಗಿದೆ ಬಂದಿದೆ. ಗೊಟ್ಟವೆಂದರೆ ಬಿದಿರು ತುಂಡಿನಿಂದ ಮಾಡಿದ ಬಾಟಲಿ ತರಹ. ಜಾನುವಾರು ಬಾಯಿ ತೆರೆಯಿಸಿ ಔಷಧಿ ಸುರಿಯುವ ಸಾಧನ. ಜಾನುವಾರು ಬಾಯೊಳಕ್ಕೆ ಹೋಗುವಂತೆ ಸಪೂರ (ಸಣ್ಣದಾದ) ವಿರುವ ಬಿದಿರನ್ನು ತಳಗಟ್ಟಿ ಇರುವ ಕಡೆ ಗಣ್ಣಿಗೆ ಸರಿಯಾಗಿ ಕತ್ತರಿಸಿ (ಒಂದು ಗಣ್ಣಿನಿಂದ ಮತ್ತೊಂದು ಗಣ್ಣಿಗೆ ಸಾಧಾರಣ ಒಂದು ಅಡಿ ಉದ್ದವಿರುತ್ತೆ), ಗಣ್ಣಿನ ಮತ್ತೊಂದು ಭಾಗದ ಬಾಯನ್ನು ತ್ರಿಕೋಣಾಕಾರವಾಗಿ ಕೆತ್ತಿದರೆ ಗೊಟ್ಟ ರೆಡಿಯಾಗುತ್ತದೆ. ಬಿದಿರು ಒಳಗೆ ಟೊಳ್ಳಾಗಿರಬೇಕು.

ಕಾದು ಗೊರಸು ಡೆಯುವ ಕಾಯಿಲೆಗೆ 'ಕಾಲೊಡೆ" ಎನ್ನುತ್ತಾರೆ. ಕಾಲೊಡೆಯಲ್ಲಿ ಗೊರಸಿನ ಒಳಭಾಗ ಒಡೆದು ಸೀಳಿರುತ್ತೆ. ಜಾನುವಾರುಗಳು ಈ ರೀತಿ ಸೀಳು ಬಂದೊಡನೆ ಗೊರಸಿನ ಸಂದಿಯನ್ನು ನೆಕ್ಕಿ ತುರಿಸಿಕೊಳ್ಳುತ್ತವೆ. ಹೀಗಾದಾಗ ಆ ಜಾಗದಲ್ಲಿ ಗಾಯವಾಗಿ ನೊಣಗಳು ಪ್ರವೇಶಿಸಿ ಮೊಟ್ಟೆಯಿಡುತ್ತವೆ. ಈ ಮೊಟ್ಟೆಯ ಗುಂಪಿಗೆ 'ಇಪ್ಪ" ಎನ್ನುತ್ತಾರೆ. ಈ ಮೊಟ್ಟೆಗಳು ಒಡೆದು ಗಾಯದಲ್ಲಿ ಹುಳುವಾಗಿ ಗಾಯ ದೊಡ್ಡದಾಗುತ್ತಾ ಬರುವುದರಿಂದ ರಕ್ತ ಸೋರಿಕೆಯೂ ಜಾಸ್ತಿಯಾಗುತ್ತೆ. ಈ ಕಾಲೊಡೆ ಖಾಯಿಲೆಗೆ ಮಲೆನಾಡಿನಲ್ಲಿ ಒಂದು ಉಪಾಯ ಕಂಡು ಹಿಡಿದಿದ್ದರು. ಜಾನುವಾರುಗಳಿಗೆ ಕಾಲೊಡೆಯಾಗಿ ಹುಳುವಾಗಿದೆ ಎಂದು ಗೊತ್ತಾದೊಡನೆ ಮನೆ ಹತ್ತಿರ ಅಂಗಳ ಇಲ್ಲವೇ ಗದ್ದೆಯಲ್ಲಿ ಕೆಲವು ಭಾಗಕ್ಕೆ ನೀರು ಹಾಕಿ ಚೆನ್ನಾಗಿ ಕೆಸರು ಮಾಡಿ, ಕಟ್ಟೆ ಕಟ್ಟಿ ನೀರು ನಿಲ್ಲಿಸಿ, ಈ ನೀರಿಗೆ ಚೊಗರು ತೆಪ್ಪೆ ಅಂದರೆ ನೇರಲು ಮರದ ಅಥವಾ ಗೋಳಿ ಮರದ ತೆಪ್ಪೆ ಮತ್ತು ಕೆಲವು ಚಕ್ಕೆ ತಂದು ಜಜ್ಜಿ ಹಾಕುತ್ತಿದ್ದರು. ನೀರೂ ಪೂರಾ ಚೊಗರಾಗಿರುತ್ತಿತ್ತು. ಈ ಚೊಗರು ಕೆಸರಿನಲ್ಲಿ ಜಾನುವಾರುಗಳನ್ನು ಕಟ್ಟುತ್ತಿದ್ದರು. ಚೊಗರೊಳಗೆ ಗೊರಸು ಮುಳುಗಿರುತ್ತಿದ್ದುದ್ದರಿಂದ ನೊಣಗಳಿಗೆ ಗಾಯದ ಮೇಲೆ ಕೂರಲು ಅವಕಾಶವಿರುತ್ತಿರಲಿಲ್ಲ. ಒಳಗಿರುವ ಹುಳುಗಳು (Metamorphosis) ಬದಲಾವಣೆ ಪಡೆಯತಕ್ಕ ಜೀವಿಗಳಾದ್ದರಿಂದ ಅವುಗಳು ಒಂದೋ ನೊಣಗಳಾಗಿ ಹಾರಬೇಕು ಅಥವಾ ಬದಲಾವಣೆ ಕಾಲ ಬಂದಾಗ ನೀರಿನಲ್ಲಿ ಸಾಯಬೇಕು. ಹೀಗಾಗಿ ಎರಡು ದಿವಸಗಳಲ್ಲಿ ಹುಳುಗಳು ಪೂರಾ ಕೆಸರಿನಲ್ಲಿ ಸಾಯುತ್ತಿದ್ದವು. ನೊಣಗಳಿಗೆ ಹೊಸದಾಗಿ ಮೊಟ್ಟೆ (ಇಪ್ಪೆ) ಇಡಲು ಕಾಲೊಡೆ ಜಾಗಕ್ಕೆ ಪೂರಾ ಕೆಸರು ಮೆತ್ತಿರುತ್ತಿತ್ತು. ಹೀಗಾಗಿ ಗಾಯ ನಿಧಾನವಾಗಿ ಮಾಯುತ್ತಾ ಜಾನುವಾರು ಹುಷಾರಾಗುತ್ತಾ ಬರುತ್ತಿದ್ದವು. ಕಾಲ ಸುಧಾರಣೆಯಾಗಿ ಆಧುನಿಕ ಔಷಧಗಳ ಆವಿಷ್ಕಾರಗಳು ಬಂದಮೇಲೆ ಜಾನುವಾರು ಖಾಯಿಲೆಗೆ ವಿವಿಧ ನಮೂನೆಯ ಇಂಜೆಕ್ಷನ್, ಮಾತ್ರೆಗಳು ಬಂದು ಜಾನುವಾರು ಖಾಯಿಲೆಗಳು ಹತೋಟಿಯಲ್ಲಿವೆ.

ದನಕರುಗಳಿಗೆ ಮೈಯಲ್ಲಿ ಗಾಯವಾಗಿ ಹುಳುಗಳು ಕಾಣಿಸಿಕೊಂಡರೆ, ಹುಳುಗಳನ್ನು ಹೋಗಲಾಡಿಸಲು 'ಹುಳುಮುಟ್ಟಸ' ಎಂಬುದನ್ನು ಮಾಡಿಸುತ್ತಿದ್ದರು. ಅಂದರೆ ಈ ರೀತಿ ಮುಟ್ಸ ಮಾಡುವವರೇ ಬೇರೆ ಜನ ಇರುತ್ತಿದ್ದರು ಜಾನುವಾರುಗಳಿಗೆ ಗಾಯವಾಗಿ ಹುಳುವಾಗಿದೆ ಎಂದು ಅವರಿಗೆ ತಿಳಿಸಿದರೆ ಸರಿ, ಅವರು ಮಾರನೇ ಬೆಳಿಗ್ಗೆ ಯಾವುದೋ ಮರದ ತೆಪ್ಪೆ ಮತ್ತು ಚಕ್ಕೆ ತಂದು ಹುಳುವಾದ ಜಾನುವಾರಿಗೆ ಚಕ್ಕೆ ತುಂಡೊಂದನ್ನು ತಿನ್ನಿಸಿ ಇದೇ ಚಕ್ಕೆ ತುಂಡೊಂದನ್ನು

ಅದರ ಕೊರಳಿಗೆ ಕಟ್ಟಿ ಹೋಗುತ್ತಿದ್ದರು. ಬೆಳಿಗ್ಗೆ ಅವರು ಬಂದು ಜಾನುವಾರಿಗೆ ಈ ರೀತಿ ಔಷಧಿ ಮುಟ್ಟ ಮಾಡುವವರೆಗೂ ಯಾರೂ ಅವರಲ್ಲಿ ಮಾತನಾಡುವಂತಿರಲಿಲ್ಲ. ಅವರು ಆ ಹುಳ ಮುಟ್ಟ ಯಾವುದೆಂದು ಯಾರಿಗೂ ಹೇಳುತ್ತಿರಲಿಲ್ಲ. ಆದಾಗ್ಯೂ ಇವರು ಮುಟ್ಟ ಮಾಡಿ ಹೋಗಿ ಕೆಲವು ಹೊತ್ತಿನೊಳಗಾಗಿ ಗಾಯದಿಂದ ಹುಳುಗಳು ಮುದ್ದೆ ಮುದ್ದೆಯಾಗಿ ಬಿದ್ದು, ಕೆಲವರು ತಾಸುಗಳಲ್ಲಿಯೇ ಹುಳುಮುಕ್ತವಾಗುತ್ತಿತ್ತು.

ನಮ್ಮೂರಿನಲ್ಲಿ ಭೈರ ಎಂಬುವವನಿದ್ದ. ಈತನದು ಬೇರೆ ತರಹದ ಹುಳು ಮುಟ್ಟ. ಹುಳುವಾದ ವಿಷಯ ಅವನಿಗೆ ತಿಳಿಸಿದಲ್ಲಿ ಅವನೂ ಸಹ ಬೆಳಿಗ್ಗೆ ನಸುಕಿನಲ್ಲಿ ಯಾರಲ್ಲಿಯೂ ಮಾತನಾಡದೆ ಬೆಣಚುಕಲ್ಲು ತರಹದ ಯಾವುದೋ ಕಲ್ಲೆರಡನ್ನು ತಗೊಂಡು ಬಂದು ಗಾಯಕ್ಕೆ ಕಲ್ಲುಗಳನ್ನು ಸುಳಿದು ಕಲ್ಲಿಗೆ ಕಲ್ಲು ಕುಟ್ಟಿ ಬಿಸಾಡುತ್ತಿದ್ದ. ಅನಂತರ ಹುಳುಗಳು ತಾವಾಗಿಯೇ ಗಾಯದಿಂದ ಮುದ್ದೆ ಮುದ್ದೆಯಾಗಿ ಬಿದ್ದು ಹೋಗುತ್ತಿದ್ದವು.

ಇನ್ನು ಎಮ್ಮೆಗಳ ವಿಷಯಕ್ಕೆ ಬಂದರೆ ಮಲೆನಾಡಿನಲ್ಲಿ ಅಂದಾಜು ೧೦೦ ವರ್ಷಗಳ ಹಿಂದೆ ಎಮ್ಮೆಗಳೇ ಇರಲಿಲ್ಲವೆಂದು ಹೇಳುತ್ತಾರೆ. ಇಲ್ಲಿ ಮಳೆ ತುಂಬಾ ಜಾಸ್ತಿಯಾದ್ದರಿಂದ ಮಲೆನಾಡಿನ ಹವಾ ಅವುಗಳಿಗೆ ಒಗ್ಗುತ್ತಿರಲಿಲ್ಲ. ಇದಕ್ಕಿಂತ ಮುಖ್ಯವಾಗಿ ಹರಿಹರ- ದಾವಣಗೆರೆ ಕಡೆಗಳಿಂದ ಎಮ್ಮೆಗಳನ್ನು ತರಲು ಯಾರೂ ಮುಂದೆ ಬರುತ್ತಿರಲಿಲ್ಲ. ಹೀಗಾಗಿ ಆಗ ಮಲೆನಾಡಿನಲ್ಲಿ ಎಮ್ಮೆಗಳ ಅಭಾವವಿತ್ತು. ನಂತರ ಕೆಲವರು ಹರಿಹರ- ದಾವಣಗೆರೆಯಲ್ಲಿ ಎಮ್ಮೆ ಖರೀದಿಸಿ ಕಾಲು ನಡಿಗೆಯಲ್ಲಿಯೇ ಬರುತ್ತಾ, ಮಧ್ಯ ಮಧ್ಯ ಕ್ಯಾಂಪ್ ಮಾಡುತ್ತಾ ಎಮ್ಮೆಗಳನ್ನು ತರಲು ಪ್ರಾರಂಭಿಸಿದರು. ಹೀಗೆ ಬರುವಾಗ ಬಹುದೂರದ ಪ್ರಯಾಣವಾದ್ದರಿಂದ ಕರುಗಳು ನಡೆಯಲಾರದೇ ದಾರಿಯಲ್ಲೇ ಸಾಯುತ್ತಿದ್ದು ಎಮ್ಮೆಗಳನ್ನು ಕೊಂಡು ತರುತ್ತಿದ್ದವರಿಗೆ ಲುಕ್ಸಾನಾಗುತ್ತಿತ್ತು. ನಂತರದ ದಿನಗಳಲ್ಲಿ ಎಮ್ಮೆಗಳನ್ನು ತರುವಾಗ ಕರುಗಳಿಗಾಗಿ ಎತ್ತಿನಗಾಡಿ ಮಾಡಿಕೊಂಡು ಬರುವ ಪಯಣ ಶುರುವಾಯಿತು. ಈ ವ್ಯವಸ್ಥೆಯೂ ಕೆಲವು ವರ್ಷಗಳು ನಡೆದು ನಂತರ ಲಾರಿಯಲ್ಲಿ ಎಮ್ಮೆ, ಎಮ್ಮೆ ಕರುಗಳು ಬರಲು ಪ್ರಾರಂಭವಾಯಿತು.

ಪೂರ್ವದಲ್ಲಿ ಮಲೆನಾಡಿನ ಹವಾಕ್ಕೆ ಎಮ್ಮೆಗಳು ಬಹಳ ದಿನಗಳು ಬದುಕಿ ಉಳಿಯುತ್ತಿರಲಿಲ್ಲ. ಹೀಗಾಗಿ ಪ್ರತಿ ವರುಷ ಬೇಸಿಗೆಯಲ್ಲಿ ಎಮ್ಮೆಗಳನ್ನು ತರುವುದು ಮಳೆಗಾಲ ಪೂರೈಸುತ್ತಿದ್ದಂತೆ ಅವುಗಳ ಸಾವು ಆಗಿ ಪುನಃ ಹೊಸ ಎಮ್ಮೆಗಳನ್ನು ಕೊಳ್ಳುವುದಾಗಿತ್ತು. ನಂತರ ಅದೇನು ಹವಾ ಬದಲಾವಣೆಯೋ ಅಥವಾ ಸಾಕಣೆಯಲ್ಲಿ ಮುತುವರ್ಜಿಯೋ ಎಮ್ಮೆಗಳು ಮಲೆನಾಡಿನಲ್ಲಿ ದೀರ್ಘಕಾಲ ಬದುಕಿ ಉಳಿಯುವಂತಾಯಿತು. ಜೊತೆಗೆ ಎಲ್ಲಾ ಹಳ್ಳಿಗಳಲ್ಲಿಯೂ ಜಾನುವಾರು ಆಸ್ಪತ್ರೆ, ನುರಿತ ವೈದ್ಯರು, ಹೊಸ ಹೊಸ ನಮೂನೆಯ ನಿದಾನಗಳು, ಔಷಧಿಗಳು ಬಂದು ಎಮ್ಮೆಗಳ ಸಂತಾನವೃದ್ಧಿಯಾಗುತ್ತಾ ಬಂತು. ಆದರೆ ಯಾವಾಗ ಹೊಸ ಹೊಸ ತಳಿ ದನಗಳು ಬರಲು ಪ್ರಾರಂಭವಾಯ್ತೋ ಮತ್ತು ಡೈರಿ ಹಾಲು ದೊರೆಯಲು ಶುರುವಾಯ್ತೋ ಆಗ ಎಮ್ಮೆ ಸಾಕುವ ಖಾಯಷ್ ಜನರಲ್ಲಿ ಕಡಿಮೆಯಾಯಿತು. ಎಮ್ಮೆಗಳ ಬೆಲೆಯೂ ತುಂಬ ತುಟ್ಟಿಯಾಯ್ತು. ಹೀಗಾಗಿ ಮಲೆನಾಡಿನಲ್ಲಿ ಎಮ್ಮೆಗಳ ಸಾಂದ್ರತೆ ಕಡಿಮೆಯಾಯ್ತು.

ಮಲೆನಾಡಿನಲ್ಲಿ ಹಿಂದೆ (ಹಾಗೂ ಈಗಲೂ ಸಹಾ) ದೂರದೂರ ವಾಸದ ಮನೆಗಳಿರುತ್ತಿದ್ದು ಜನಸಾಂದ್ರತೆ ಕಡಿಮೆ ಇರುತ್ತಿತ್ತು. ಆದರೂ ಗೋಸಂಪತ್ತು ಹೇರಳವಾಗಿತ್ತಾದರೂ, ಕಾಡಿನ ಸಾಂದ್ರತೆಯೂ ದಟ್ಟವಾಗಿದ್ದು ಹುಲಿಗಳ ವಾಸವೂ ಇರುತ್ತಿತ್ತು. ಹೀಗಾಗಿ ಪ್ರತಿ ಮನೆಗೂ ಅಥವಾ ೨,೩ ಮನೆಗಳವರು ಸೇರಿ ದನಕರುಗಳ ಕಾವಲಿಗೆ ಜನ ನೇಮಿಸಿಕೊಳ್ಳುತ್ತಿದ್ದರು. ಈತ ಇಲ್ಲೇ ಹಳ್ಳಿ ಸಮೀಪದಲ್ಲಿ ವಾಸವಿದ್ದನಾಗಿ, ದಿನವೂ ಬೆಳಗ್ಗೆ ದನಗಳ ಹಾಲು ಹಿಂಡಿದ ನಂತರ ದನಗಳನ್ನು ಗುಡ್ಡಕ್ಕೆ ಹೊಡೆದುಕೊಂಡು ಹೋಗಿ ಹಗಲಿಡೀ ಮೇಯಿಸಿಕೊಂಡು ಸಾಯಂಕಾಲ ಜಾನುವಾರುಗಳನ್ನು ವಾಪಸು ಹೊಡೆದುಕೊಂಡು ಬಂದು ಕಟ್ಟಿಹಾಕಿ ಹೋಗುವ ರೂಢಿ ಹಳ್ಳಿಗಳಲ್ಲಿರುತ್ತಿತ್ತು. ಈ ದನ ಕಾವಲಿನವನನ್ನು ಮನೆಯ ಗೃಹಿಣಿಯರು, ಹೆಂಗಸರು, ಮಕ್ಕಳು ಊಟ-ತಿಂಡಿ, ಬಟ್ಟೆಬರೆ ವಿಷಯದಲ್ಲಿ ತುಂಬಾ ಅಕ್ಕರೆಯಿಂದ ಕಾಣುತ್ತಿದ್ದರು. ಕಾಡಿನಲ್ಲಿ ಬೆಳೆಯುವ ಹಣ್ಣುಗಳು, ಮಡಹಾಗಲಕಾಯಿ, ಔಷಧಿ ತೆಪ್ಪೆ, ಕುಡಿಗಳು ಮುಂತಾಗಿ ಈತ ತನ್ನ ಕಾವಲು ಮನೆಯವರ ಅಪೇಕ್ಷೆಗನುಗುಣವಾಗಿ ದನ ಕಾಯಲು ಹೋದಾಗ್ಯೆ ನೋಡಿ ಕಾಡಿನಿಂದ ತಂದುಕೊಡುವುದು ಇರುತ್ತಿತ್ತು. ಈ ರೀತಿ ತಂದು ಒದಗಿಸುವುದು ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ನಡೆಯುತ್ತಿತ್ತು. ದನಕರುಗಳು ಇವನ ಮಾತಿಗೂ, ಕೂಗಿಗೂ ಹೆದರಿ ತಿಳುವಳಿಕೆಯುಳ್ಳ ಪ್ರಾಣಿಗಳಂತೆ ವರ್ತಿಸುವುದನ್ನು ನೋಡುವುದೇ ಒಂದು ಆನಂದದ ವಿಷಯವಾಗಿತ್ತು.

ಕಾವಲಿನವನಿಗೆ ತನ್ನ ಕಾವಲಿಗೆ ಒಳಪಟ್ಟ ಎಲ್ಲಾ ದನಕರುಗಳ ಸ್ವಭಾವ, ಚರ್ಯೆ ಚೆನ್ನಾಗಿ ಮನದಟ್ಟಿರುತ್ತಿತ್ತು. ದನಗಳಿಗೆಲ್ಲಾ ಆತ ಪ್ರತಿಯೊಂದಕ್ಕೂ ನಾಮಕರಣ ಮಾಡಿಕೊಂಡಿರುತ್ತಿದ್ದ. ತುಡುಗು, ತಂಟೆ ದನಗಳಿಗೂ

ಗುಣಸ್ವಭಾವದಲ್ಲಿ ಸಾಧುವಾಗಿರತಕ್ಕ ದನಕರುಗಳಿಗೂ, ಗುಡ್ಡಕ್ಕೆ ಮೇಯಲು ಹೋಗುವಾಗ ಜಾನುವಾರು ಗುಂಪು ತಪ್ಪಿ ಹೋಗಬಾರದೆಂದು ಗುರುತಿಗಾಗಿ 'ಮರುಗುಣಿ' ಅಥವಾ 'ದೊಂಟೆ' ಎಂದು ಕರೆಯಲ್ಪಡುವ ಬಿದಿರಿನ ಗಂಟೆಗಳನ್ನು ಮಾಡಿ ಕೊರಳಿಗೆ ಕಟ್ಟಿ ಹೊಡೆದುಕೊಂಡು ಹೋಗುತ್ತಿದ್ದ. ವಿವಿಧ ದೊಂಟೆಗಳ ವಿವಿಧ ಧ್ವನಿ ಪರಿಚಯ ಆತನಿಗೆ ಚೆನ್ನಾಗಿರುತ್ತಿದ್ದು, ತುಡುಗು ತಂಟೆ ದನಗಳು ಗುಂಪು ಬಿಡುವ ಸಂದರ್ಭ ಕಂಡಲ್ಲಿ ದೊಂಟೆ ಶಬ್ದ ಕೇಳಿಯೇ, ತಾನು ಕುಳಿತಲ್ಲಿಂದ ಅವುಗಳ ಹೆಸರು ಹೇಳಿ ಗಲಾಟೆ ಮಾಡುತ್ತಿದ್ದ. ಈತನ ಗಲಾಟೆ ಕೇಳಿದೊಡನೆಯೇ, ಅವುಗಳು ಅಪರಾಧಿಪ್ರಜ್ಞೆಯಿಂದ ಗುಂಪಿನಲ್ಲಿ ಸೇರುತ್ತಿದ್ದವು. ಈ ರೀತಿ ದನಗಳನ್ನುಮೇಯಿಸಿ, ಸಾಯಂಕಾಲ ಗುಡ್ಡದಿಂದ ದನಗಳ ಗುಂಪಿನೊಡನೆ ವಾಪಸು ಮನೆಗಳಿಗೆ ತಂದು ಬಿಡುವುದು ಈತನ ಕೆಲಸವಾಗಿತ್ತು.

ಈಗ ಕಾಲ ವೈಪರೀತ್ಯದಿಂದ ಜಾನುವಾರುಗಳು ತೀರಾ ಕಡಿಮೆಯಾಗಿವೆ. ಜಾಸ್ತಿ ಇದ್ದಲ್ಲಿ ಸಾಕುವುದಕ್ಕೂ ತುಂಬಾ ಖರ್ಚು ವೆಚ್ಚ ಬರುತ್ತಿದೆ. ಹೀಗಾಗಿ ರೈತರುಗಳ ಮನೆಗಳಲ್ಲಿ ಹೊಸ ಹೊಸ ತಳಿಯ ಅತಿ ಹೆಚ್ಚು ಹಾಲು ಹಿಂಡುವ ಒಂದೋ ಎರಡೋ ದನ ಸಾಕಿಕೊಂಡು ಬರುವ ಅಭ್ಯಾಸ ಒಗ್ಗುತ್ತಾ ಬಂದಿದೆ. ಜಮೀನು ವ್ಯವಸಾಯಕ್ಕಾಗಿ ಗೊಬ್ಬರ ಜಾಸ್ತಿಯಾದವರಿಂದ ಕೊಂಡುತಂದು ವ್ಯವಸಾಯ ಮಾಡುವ ಕಾಲ ಬಂದಿದೆ. ಈಗ ಹೈನು ಸಮೃದ್ಧಿಯಾಗಿದ್ದು ಬೇಕಾದಷ್ಟು ಹಾಲು ದೊರೆಯುತ್ತಾದರೂ ಸ್ಥಳೀಯ ತಳಿ ಹಸುಗಳ ಸಂಖ್ಯೆ ಕ್ಷೀಣಿಸುತ್ತಾ ಬರುತ್ತಿರುವುದು ದುಃಖಕರವಾಗಿದೆ.

**ಪೂರ್ವದಲ್ಲಿ ಅಡಿಕೆ ತೋಟದ ಬೇಸಾಯದ ಕ್ರಮ:** ಮಲೆನಾಡಿನಲ್ಲಿ ಸ್ಥಳೀಯ ಕೂಲಿ ಕಾರ್ಮಿಕರು ಹಿಂದಿನಿಂದಲೂ ಕಡಿಮೆ. ಮಲೆನಾಡಿನ ವ್ಯವಸಾಯದ ಕೆಲಸ ಕಾರ್ಯಗಳಿಗೂ ಸಾಮಾನ್ಯ ದಕ್ಷಿಣ ಕನ್ನಡದ ಕೂಲಿ ಕಾರ್ಮಿಕರೇ ಬರಬೇಕಾಗಿತ್ತು. ದಕ್ಷಿಣ ಕನ್ನಡದವರಿಂದಾಗಿಯೇ ಮಲೆನಾಡು ಕಾಫಿ ತೋಟಗಳು, ಗೊಂಡಾರಣ್ಯವಾಗಿದ್ದ ಕಾಲದಲ್ಲಿ ತಯಾರು ಮಾಡಲ್ಪಟ್ಟದ್ದೆಂದರೆ ಅತಿಶಯೋಕ್ತಿ ಆಗಲಾರದು.

ದಕ್ಷಿಣ ಕನ್ನಡದಲ್ಲಿ ಜನಸಾಂದ್ರತೆ ಜಾಸ್ತಿ ಇದ್ದ ಕಾಲ. ಬಡತನವೂ ಜಾಸ್ತಿ ಇದ್ದ ಕಾಲ. ಈಗಿನಂತೆ ವಿದ್ಯಾ ಸೌಕರ್ಯವೂ ಇರಲಿಲ್ಲ. ವಿದ್ಯೆಗಾಗಿ ಜನ ಕಾಲ ವ್ಯಯ ಮಾಡುವಷ್ಟು ಸಂಪತ್ತೂ ಇರಲಿಲ್ಲ ಮತ್ತು ಅಕ್ಷರ ವಿದ್ಯೆಗಾಗಿ ಈಗಿನಷ್ಟು ತುಡಿತವೂ ಇರಲಿಲ್ಲ. ಸದ್ಯ ಹೊಟ್ಟೆಪಾಡಾದರೆ ಸಾಕೆಂಬಷ್ಟು ಬಡತನ. ಜನಸಾಂದ್ರತೆ ಲೆಕ್ಕದಲ್ಲಿ ವ್ಯವಸಾಯ ಭೂಮಿ ಸಂಪತ್ತು ಕಡಿಮೆ ಇದ್ದಿತ್ತು. ಅದು ಜಮೀನುದಾರಿ ಕಾಲ. ತರಿ ಜಮೀನು ಸಂಣ ಸಂಣ ಗೇಣಿದಾರರ ಸಾಗುವಳಿಯಲ್ಲಿತ್ತು. ಒಡೆಯರಿಗೆ ಗೇಣಿ ಕೊಟ್ಟು ಉಳಿದ ಧಾನ್ಯ ಜೀವನಕ್ಕೆ ಸಾಕಾಗುತ್ತಿರಲಿಲ್ಲ. ತುಂಬಾ ಜನರಿರುವ ಅವಿಭಕ್ತ ಕುಟುಂಬಗಳೇ ಜಾಸ್ತಿ. ಹೀಗಾಗಿ ದಕ್ಷಿಣ ಕನ್ನಡದಿಂದ ಜನರು ಹೊಟ್ಟೆಪಾಡಿಗಾಗಿ ವಲಸೆ ಬರುತ್ತಿದ್ದರು. ಮಲೆನಾಡಿನಲ್ಲಿ ವ್ಯವಸಾಯಕ್ಕಾಗಿ ಕೂಲಿ ಕಾರ್ಮಿಕರು ಬಹುಪಾಲು ದಕ್ಷಿಣ ಕನ್ನಡದವರೇ ಜಾಸ್ತಿ ಇರುತ್ತಿದ್ದರು.

ದಕ್ಷಿಣ ಕನ್ನಡದ ಕೂಲಿಗೆ ಸಂಬಂಧಿಸಿದ ವ್ಯವಸಾಯ ಕಾರ್ಮಿಕರು ಮಳೆಗಾಲ ಪ್ರಾರಂಭವಾಗುತ್ತಿದ್ದಂತೆಯೇ ಊರಿನಲ್ಲಿ ತಮಗಿರುವ ಅಲ್ಪ ಸ್ವಲ್ಪ ತರೀ ಜಮೀನು ಸಾಗುವಳಿ ಪೂರೈಸಿ, ಕೆಲಸ ಅರಸಿಕೊಂಡು ಘಟ್ಟ ಹತ್ತುತ್ತಿದ್ದರು. ಅಂದರೆ ಕರಾವಳಿಯಿಂದ ಪಶ್ಚಿಮಘಟ್ಟದ ಗುಡ್ಡಗಳನ್ನೇರಿ (ಸಾಧಾರಣವಾಗಿ ನಡೆದು ಬರುವುದೇ ಜಾಸ್ತಿ ಇತ್ತು) ಮಲೆನಾಡಿಗೆ ಕೃಷಿ ವೃತ್ತಿಗೆ ಕೂಲಿಗಾರರಾಗಿ ಬರುತ್ತಿದ್ದರು. ಹೀಗೆ ಬರುವವರು ಕೆಲವರು ಸ್ವತಂತ್ರವಾಗಿ ಕೆಲಸ ಹುಡುಕುತ್ತಲೂ, ಇನ್ನು ಕೆಲವರು ಸೇರೆಗಾರರ ಸ್ವಾಧೀನ ಮೂಲಕವೂ ಬರುತ್ತಿದ್ದರು. ಸೇರೆಗಾರರೆಂದರೆ, ಈತ ತನ್ನೂರಿನ ಆಸುಪಾಸು ಕೆಲಸಕ್ಕೆ ಬರತಕ್ಕ ಜನರನ್ನು ಒಟ್ಟು ಮಾಡಿಕೊಂಡು ಅವರುಗಳಿಗೆ ಖಾಯಂ ಕೆಲಸ ದೊರಕಿಸುವ ಷರತ್ತು ಮೇರೆ ಭರವಸೆ ಕೊಟ್ಟು ಮಲೆನಾಡಿಗೆ ಬಂದು ಕೆಲಸಕಾರ್ಯಗಳನ್ನು ವಹಿಸಿಕೊಂಡು ಪೂರೈಸಿ ಕೊಡತಕ್ಕವನಾಗಿರುತ್ತಿದ್ದ. ಈ ಪೈಕಿ ಕೊಕ್ಕರ್ಣೆ ಕುಂದಾಪುರದ ಕಡೆಯವರು ಸಾಗರ, ಸಿದ್ದಾಪುರ, ಶಿರ್ಶಿ ಕಡೆಗೆ ಹೋಗುತ್ತಿದ್ದರು. ಉಡುಪಿ ಕಡೆಯವರು ಚಿಕ್ಕಮಗಳೂರು ಜಿಲ್ಲೆ ಮಲೆನಾಡಿಗೆ ಬರುತ್ತಿದ್ದರು. ಈ ರೀತಿ ಬಂದ ಕೆಲಸದವರಿಗೆ ಮಲೆನಾಡಿನಲ್ಲಿ ತೋಟದ ಪಕ್ಕವೋ ತರಿ ಜಮೀನು ಪಕ್ಕವೋ ಬಿಡಾರಗಳು ವಸತಿಗೆ ಇರುತ್ತಿದ್ದವು. ಸಾಧಾರಣವಾಗಿ ಮಲೆನಾಡಿನಲ್ಲಿ ತರೀ ವ್ಯವಸಾಯ ದಕ್ಷಿಣ ಕನ್ನಡದಕ್ಕಿಂತ ತಡವಾಗಿ ಆಗುತ್ತಿತ್ತು. ತರೀ ವ್ಯವಸಾಯ ಆದ ನಂತರ ಅಡಿಕೆ ತೋಟದ ಬೇಸಾಯ ಕಾಮಗಾರಿ ಶುರುವಾಗುತ್ತಿತ್ತು. ತೋಟದ ಬೇಸಾಯ ಮಾಡುತ್ತಾ ಅಡಿಕೆ ಕೊಯ್ಲು ಬಂದರೆ ಅಡಿಕೆ ಸುಲಿತ ಒಂದನ್ನು ಬಿಟ್ಟು ಬಾಕಿಯಂತೆ ಕೊನೆ ತೆಗೆಯುವುದು ಮೊದಲುಗೊಂಡು ಎಲ್ಲ ಕೆಲಸಗಳು ಇವರಿಂದಲೇ ನಡೆಯುತ್ತಿತ್ತು.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

# ಅವನೆಲ್ಲಿರುವನು -ಎಂತಿರುವನು



**ಡಾ. ಮಂಜುನಾಥ್**

ಇತ್ತೀಚೆಗೆ ನಮ್ಮ ನಾಡಲ್ಲಿ ದೇವಾಲಯಗಳನ್ನು ಮರುಪಡೆಯುವ ಗಲಭೆ, ನ್ಯಾಯಾಲಯಗಳ ಮೆಟ್ಟಿಲು ಹತ್ತಿದೆ. ಆದರೆ ಇದು ದಿಟವಾಗಿ, ದೇವರ- ದೇವಾಲಯಗಳನ್ನು ಕುರಿತ ವಿಷಯವಾಗಿದೆಯೇ? ಇಲ್ಲವೇ "ನಾನು - ನನ್ನದು" ಎನ್ನುವ ಅನಿಸಿಕೆಯೇ? ನಮ್ಮ ನಾಡಲ್ಲಿ ಎರಡು ಬಗೆಯ ದೇವರ ಕುರಿತಾಗಿ ಆಚರಣೆಗಳಿವೆ. ಎಲ್ಲೆಲ್ಲಿಯೂ ಆ ಹಳ್ಳಿಯ, ಊರ, ದೇವತೆ ಒಬ್ಬ ತಾಯಿಯ ರೂಪದಲ್ಲಿಯೇ ಕಾಣಿಸಿಕೊಳ್ಳುತ್ತಾಳೆ. "ಇದು ನಮ್ಮ ನಾಡಿನ ದ್ರಾವಿಡ ಹಾಗೂ ಕಾಡು ಜನರ ನಂಬಿಕೆಯಾಗಿದೆ. "ನಮ್ಮೆಲ್ಲರನ್ನು ಹುಟ್ಟಿಸಿದ್ದೂ ಆ ತಾಯಿಯೇ, ಬೆಳೆಸಿ ಕಾಪಾಡಿದ್ದೂ ಆ ತಾಯಿಯೇ, ನಾವು ಕಡೆಗೆ ಹೋಗುವುದು ಆ ತಾಯಿಯ ಮಡಿಲಿಗೇ" ಎನ್ನುವುದು ಈ ಬುಡಕಟ್ಟುಗಳ ನಂಬಿಕೆಯಾಗಿದೆ. ಅಂತೆಯೇ ಅವರೆಲ್ಲರೂ ಸತ್ತ ಮೇಲೆ ಮತ್ತೆ ತಾಯಿಯ ಒಡಲನ್ನೇ ಸೇರುತ್ತಾರೆ ಇದು ಇಂದಿನದಲ್ಲ.

ಸಿಂಧೂ ಕಣಿವೆಯಲ್ಲಿ ಈಗ ಹುದುಗಿದ ಊರುಗಳಲ್ಲಿ ಸಿಕ್ಕ ಹೆಣಗಳ ಮೂಳೆಗಳು ಅದನ್ನೇ ಸಾರುತ್ತಿವೆ ಇನ್ನೂ ಆಗೆದರೆ ಮತ್ತಷ್ಟು ಮೂಳೆಗಳು ದೊರಕಿ ಇದನ್ನೇ ಮತ್ತೆ ಸಾರುತ್ತವೆ. ಆದರೆ "ಬೆಂಕಿಯೇ ನಮ್ಮನ್ನು ಬಾನಿನಲ್ಲಿ ಇರುವ ದೇವರ ಬಳಿ ಒಯ್ಯುವುದು" ಎಂಬ ನಂಬಿಕೆಯ ಮಂದಿ ಬಂದಿದ್ದು ಈಗಿನ ಇರಾನ್ ನಿಂದ. ಏಕೆಂದರೆ ಅಲ್ಲಿಯೂ ಬೆಂಕಿಯೇ ಪವಿತ್ರವಾದದ್ದು. ದೇವರು ಆಗಸದಲ್ಲಿರುವ ಶಕ್ತಿ ಎಂಬ ನಂಬಿಕೆಯುಳ್ಳ ನಾಡು. ಹೀಗಾಗಿ ಅಲ್ಲಿಂದ ಬಂದ ಮಂದಿ ಆ ನಂಬಿಕೆಗಳನ್ನು ಬಿಡದೆ ಅದನ್ನೇ ಅನುಸರಿಸುತ್ತಾ ಬಂದರು. ಈಗ "ಮಧ್ಯಪೂರ್ವ" ಎಂದು ಯುರೋಪಿಯನ್ ನವರು ಕರೆದ ನಾಡುಗಳಲ್ಲಿಯೇ 'ದೇವರು ಸ್ವರ್ಗದಲ್ಲಿರುತ್ತಾನೆ ಅವನನ್ನು ನಂಬಿದ ಜನವನ್ನು ಅಲ್ಲಿಗೆ ಕರೆದೊಯ್ಯುತ್ತಾನೆ ನಂಬದಿರುವ ಮಂದಿಯನ್ನು ನರಕಕ್ಕೆ ನೂಕುತ್ತಾನೆ' ಎಂಬ ನಂಬಿಕೆ ಈ ನಾಡುಗಳಿಂದಲೇ ಮೂಡಿದ್ದು. ನಮ್ಮ ವೇದಗಳೂ ಇದನ್ನೇ ಸಾರುವುದು. ಆ ದೇವೇಂದ್ರ ತನ್ನ ಮಂದಿಯೊಡನೆ ಅಗಸದಲ್ಲಿರುತ್ತಾನೆ ಅವನನ್ನೇ ನಂಬಬೇಕು, ಅವನನ್ನೇ ಆರಾಧಿಸಬೇಕು ಎನ್ನುವುದಾಯಿತು. ಈ ದೇವೇಂದ್ರನಿಗೆ ಅನೇಕ ಹೆಸರುಗಳು. ಗ್ರೀಸ್ ದೇಶದಲ್ಲಿ ಅವನು ಜ್ಯೂಸ್, ತುರಕಿಯ ತೆಂಕಿನಲ್ಲಿರುವ' ಊರಾದವರಿಗೆ ಅವನು "ಯೆಹೋವಾ ಅಥವಾ ಇಲ್ಹಾ", ಅರೇಬಿಯಾದ ಮುಸಲ್ಮಾನರಿಗೆ 'ಅಲ್ಲಾ'.

ಅವನ ಬಗ್ಗೆ ಕೇಳುವ ಎಲ್ಲಾ ಕಥೆಗಳಲ್ಲೂ ಸ್ವರ್ಗ- ನರಕಗಳು ಇದ್ದೇ ಇರುತ್ತವೆ. ಈತ ಭಕ್ತ- ಕರುಣಾಳು ಏನು ಅಲ್ಲ. ನಂಬದಿದ್ದವರನ್ನು ನರಕದ ಬೆಂಕಿಯಲ್ಲಿ ಅನೇಕ ಕಾಲ ಸುಡುತ್ತಾನೆ, ಗರಗಸದಿಂದ ಕೊಯ್ಯುತ್ತಾನೆ, ತನ್ನನ್ನೇ ನಂಬಬೇಕು ಎನ್ನುವುದು ಕಡ್ಡಾಯ, ಬೇರೊಬ್ಬ ದೇವರನ್ನು ನಂಬಕೂಡದು ಎನ್ನುವುದು ಕಡ್ಡಾಯ. ಹೀಗಾಗಿ ಈತ ಒಬ್ಬ ಹೊಟ್ಟೆ ಕಿಚ್ಚಿನ ದೇವರು ತಾಯಿಯಂತೆ ಎಲ್ಲರನ್ನೂ ಸಲಹುವವನಲ್ಲ. ಏಕೆ ಹೀಗೆ?

ಇತಿಹಾಸದ ಅನುಸಾರ, ಎಲ್ಲಕ್ಕಿಂತ ಹಳೆಯ ಧರ್ಮ ಈಜಿಪ್ಟ್ ಹಾಗೂ ಇರಾನ್ ನದ್ದು. ಈ ಎರಡು ನಾಡುಗಳಲ್ಲಿ ಸೂರ್ಯನೇ ದೇವರು. 'ರಾ' ಎಂದು ಹೆಸರಾದ ಈ ದೇವರ ಹೆಸರೇ ಈ ನಾಡುಗಳಿಗೂ ಬಂತು. 'ರಾತಾ' ಎನ್ನುವುದು ಈಗಿನ ಈಜಿಪ್ಟ್ ನ ಹಳೆಯ ಹೆಸರು. 'ಇರಾ' ಎನ್ನುವುದು ಇರಾನ್ ನ ಹೆಸರು. ವೇದ ಭಾಷೆಯಲ್ಲಿಯೂ 'ರಾ' ಎಂದರೆ ಸೂರ್ಯ. ಈತನೇ 'ಸೂರ್ಯನಾರಾಯಣ'ನಾದ ವೇದದಲ್ಲಿ ವಿಷ್ಣು. ತನ್ನ ಮೂರು ಹೆಜ್ಜೆಗಳಿಂದ ಈ ಆಗಸವನ್ನು ದಾಟುತ್ತಾನೆ ಎನ್ನುವುದು ಈ ಸೂರ್ಯನ ನಡಿಗೆಯಿಂದಲೇ. " ಎಂದರೂ ಬೆಳಗುತ್ತಿರುವನು ಎಂದೇ ಅರ್ಥ. ಹೀಗಾಗಿ ಕಾಲದಲ್ಲಿ ಈ ಉಪೇಂದ್ರ ನೇ ದೇವೇಂದ್ರನಿಗಿಂತ ಮಿಗಿಲಾದ. ಈತನು ಪುರಾಣ ಕತೆಗಳಲ್ಲಿ ತನ್ನನ್ನು ನಂಬಿದ ಮಂದಿಗೆ ಕರುಣಾಳುವಾಗಿ, ಬೇರೆ ಶಿವನನ್ನು ನಂಬಿದ ರಾಕ್ಷಸರನ್ನು ಕೊಲ್ಲುತ್ತಾನೆ. ಆತನನ್ನು ನಂಬಿದವರೆ ಭಕ್ತರು. ಭಕ್ತ ಎನ್ನುವುದು ಭಾಗತ ಎನ್ನುವ ಪದದ ಅಪಭ್ರಂಶ, ಎಂದರೆ ಇವನು ದೇವರ ಭಾಗೀಧಾರ ಎಂದು. ಹೀಗಾಗಿ ಇವರಲ್ಲಿ ಎರಡು ಪಂಗಡಗಳು ಕಾಣುತ್ತವೆ

. 1. ಈ ದೇವರನ್ನು ನಂಬಿದವರು ಅವನ ಸಂಪತ್ತಿನಲ್ಲಿ ಭಾಗೀದಾರರು ಎಂದರೆ ಪಾಲುಗಾರರು.

2. ನಂಬದವರಿಗೆ ಪಾಲಿಲ್ಲ.

ನಾವು ಈ ಇತಿಹಾಸ, ಭೂಗೋಳಗಳನ್ನು ಕಂಡಾಗ ನಮಗೆ ಅರಿವಾಗುವುದು ಇಂತಹ ದೇವರುಗಳು ನೀರಿಲ್ಲದ ಬರಡು ಗಾಡಿಗಳಲ್ಲೇ ಸೃಷ್ಟಿಯಾದರು. ನೀರಿಲ್ಲದೆ ಬಳಲಿದ ಮಂದಿ, ಆಗಸದತ್ತ ತಲೆ ಮಾಡಿ, ಬರದ ಮಳೆಗಳನ್ನು ಎದುರು ನೋಡುತ್ತಾ, ಆ ದೇವರೇ ತಮ್ಮನ್ನು ಉಳಿಸುತ್ತಾನೆ ಎಂದು ನಂಬಿದವರು. ತಮ್ಮನ್ನು ಸುಡುತ್ತಿರುವ ಸೂರ್ಯದೇವರು ತಂಪಾಗಿ ತಮ್ಮನ್ನು ಕಾಪಾಡಬೇಕೆಂಬುದು ಅವರ ಕೂಗಾಗಿತ್ತು. ಇದಕ್ಕೆ ಎದುರಾಗಿ ಮಳೆಯಿಂದ ಬಂದ ನೀರು ತುಂಬಿದ ನಾಡಲ್ಲಿ ಗಿಡ ಮರಗಳು ಹಸಿರಾಗಿ, ಜೀವ ಜಂತುಗಳು ಕುಣಿದಾಡುತ್ತಿರುವಲ್ಲಿ ಮಂದಿಗೆ ಕಾಣೋದು ಹಸಿರು ಹುಟ್ಟಿರುವ ಭೂಮಿತಾಯಿ ಮಾತ್ರ. ಅವಳನ್ನು ಬಿಟ್ಟು ಬೇರೆ ದೇವರುಗಳು ಈ ಮಂದಿಗೆ ಬೇಕಿಲ್ಲ. ಹೀಗೆ ಬರಡು ನಾಡುಗಳಲ್ಲಿ ಸೃಷ್ಟಿಯಾದ ದೇವರೊಬ್ಬ, ಹಸಿರು ನಾಡುಗಳಲ್ಲಿ ಪೊರೆಯುವ ತಾಯಿ ಒಬ್ಬಳು ನಮಗೆ ನಮ್ಮ ನಾಡಲ್ಲೇ ಕಾಣುತ್ತಾರೆ.

ಈಗ ಸ್ವರ್ಗ - ಆಗಸದಲ್ಲೋ ವೈಕುಂಠದಲ್ಲೂ ಇದ್ದರೆ ಏನು ಅರ್ಥ? ಅಂದರೆ ದೇವರು ನಮ್ಮೊಡನೆ ಇಲ್ಲ ಎಂದೇ ಅರ್ಥ. ಅವನನೆಲ್ಲೋ ಕುಳಿತು, ಇಲ್ಲವೇ ಮಲಗಿದ್ದರೆ ನಮ್ಮೊಡನೆ ಇರುವವರು ಯಾರು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರದ ಹುಡುಕಾಟ ನಮ್ಮ ನಾಡಿನಲ್ಲಿಯೇ ನಡೆಯಿತು.

ಇವೇ ಉಪನಿಷತ್ತುಗಳು. ಇಲ್ಲಿ ಸ್ವರ್ಗ ನರಕಗಳ ಉಲ್ಲೇಖವಿಲ್ಲ. ಎಲ್ಲೆಲ್ಲೂ-ಎಂದೆಂದೂ-ಎಲ್ಲರ ಒಡನೆಯೂ ಎಲ್ಲರಿಗೂ ಸಲ್ಲಾಪ, ಪರಬ್ರಹ್ಮನ ಕಲ್ಪನೆ ಇಲ್ಲಿ ಬಂತು. "ಈ ಶಕ್ತಿ ಗಂಡಲ್ಲ, ಹೆಣ್ಣಲ್ಲ. ತಾನು ಬೇರಲ್ಲ, ಅದು ಬೇರಲ್ಲ. ಅದೇ ತಾನು - ತಾನೇ ಅದು'. ಇಂತಹ ಕಲ್ಪನೆ ನೀರು ತುಂಬಿದ ಹಸಿರು ನಾಡಿನಲ್ಲಿಯೇ ಬರುವುದು ಸಾಧ್ಯ. ಬರಗಾಡಿನಲ್ಲಿ ಅಸಾಧ್ಯ. ಸ್ವರ್ಗಾಧಿಪತಿಯಾದ ದೇವೇಂದ್ರನನ್ನು ಪಟ್ಟದಿಂದ ತಳ್ಳಿ ಹಾಕಿ ಹೆಗ್ಗಳಿಕೆ ಈ ಉಪನಿಷತ್ತುಗಳದ್ದು. "ಅಹಂ ಬ್ರಹ್ಮ", "ತತ್ವಮಸಿ"

"ಈಶಾವಾಸ್ಯಮಂ ಇದಮ್ ಸರ್ವಮ್"

ಇವೆಲ್ಲವೂ ನಮ್ಮ ಉಪನಿಷತ್ತಿನಲ್ಲಿ , ಕ್ವಾಂಟಮ್ ಫಿಸಿಕ್ಸ್ ಬರುವ ಮೂರು ಸಾವಿರ ವರ್ಷಗಳ ಮೊದಲೇ ಕಾಣಬರುತ್ತವೆ. ಈ ಜಗತ್ತು ದೇವರಿಂದ ಸೃಷ್ಟಿಯಾಯಿತು. ಅದು ಮತ್ತೆ ನಿರ್ನಾಮವಾಗುತ್ತದೆ" ಎನ್ನುವ ಹೇಳಿಕೆ ಸುಳ್ಳು ಎಂದು ಉಪನಿಷತ್ತುಗಳು ಸಾರುತ್ತವೆ. ಆ ಶಕ್ತಿಯೇ ಎಲ್ಲೆಲ್ಲೂ ಪ್ರಕಟವಾಗುತ್ತಿರುವಾಗ ಅದೇ ಜಗತ್ತಾಗಿರುವಾಗ, ಅದಕ್ಕೆ ಹುಟ್ಟೆಂತು, ಅಳಿವೆಂತು?

ನಮ್ಮ ಇಂದ್ರಿಯಗಳಿಗೆ ತೋರುವಂತಹದು  ಮಾತ್ರ ದೇವಾಲಯವಾಗುತ್ತದೆ. ನಮ್ಮ ಹೀನ ಇಂದ್ರಿಯಗಳನ್ನು ಮೆಟ್ಟಿ ನಿಂತಾಗ ಈ ಜಗತ್ತೇ ದೇಗುಲವಾಗುತ್ತದೆ. ನಾನು ಬೇರಲ್ಲ, ಜಗತ್ತು ಬೇರಲ್ಲ ಎನ್ನುವುದು ತಿಳಿಯುತ್ತದೆ.

ಆಗ "ನ್ಯಾಯ'ವೆಂದರೇನು ಎನ್ನುವುದು ತಿಳಿಯುತ್ತದೆ. "ನ್ಯಾಯಾಲಯ"ಗಳು ನ್ಯಾಯವನ್ನು ಕಟ್ಟಿ ಹಾಕಿರುವ ಕೇವಲ "ಲಾಯಗಳೆಂಬುದೂ ತಿಳಿದು, ಹೋರಾಟ ನಿಲ್ಲುತ್ತದೆ. ಶಾಂತಿ ನೆಲೆಸುತ್ತದೆ.

## Who named Mahatma Gandhi 'father of nation'? Govt foxed

A 10-year-old girl's simple query to know if Mahatma Gandhi was ever conferred the title of The Father of The Nation has come a cropper. From the Prime Minister's Office to the ministry of home affairs no one seems to really know the answer to the question.

A Lucknow girl's simple query to know if Mahatma Gandhi was ever conferred the title of 'The Father of The Nation' has come a cropper. From the Prime Minister's Office (PMO) to the ministry of home affairs (MHA) no one seems to really know the answer to the 10-year-old's question.

They coolly forwarded the RTI plea of class VI student Aishwarya Parashar to the National Archives of India (NAI), the body that claims to be the repository of the non-current records of the Government of India. Surprisingly, the NAI, after a hectic search in their records, was unable to find the desired information and requested Aishwarya to come and search for it in NAI's public records and library material herself.

Jayaprabha Ravindran, assistant director of archives and chief public information officer (CPIO) wrote back in a letter dated March 26: "As per search among public records in the National Archives of India, there are no specific documents on the information sought by you."

As a consolation, it has promised to provide Aishwarya all facilities permissible under the rules, if she chooses to visit the national archives.

Aishwarya, expectedly, is amused. "The first piece of history taught to us in school is about Mahatma Gandhi as Father of the Nation. I never knew, I was asking such a difficult question," she says.

According to reports, when a demand to confer the title of 'Father of the Indian Constitution' on Dr Ambedkar was made, deputy prime minister LK Advani, in a letter to Delhi chief minister Sheila Dikshit in 2004, had written: "It is not, however, feasible to formally confer the title of 'Father of Indian Constitution' on Dr Ambedkar, since Article 18 (1) of the Constitution specifically provides that "no title, not being a military or academic distinction, shall be conferred by the state."

Advani further said: "I may clarify that although Mahatma Gandhi is popularly known as "Father of the Nation," no such title was ever formally conferred on him by the government."

History has it Father of the Nation is an honorific title given to a man considered the driving force behind the establishment of a nation. As per Wikipedia, it was Subhas Chandra Bose who used the term for Mahatma Gandhi, in a radio address from Singapore in 1944. Later, it was recognised by the Indian government. When Gandhi was assassinated, India's first prime minister Jawaharlal Nehru, in a radio address to the nation, had announced that the Father of the Nation" is no more.

# ಕರುಣಾಮೂರ್ತಿ

ಅರ್ಧರಾತ್ರಿಯ ಸಮಯ. ಆ ಡಾಕ್ಟರ್ ತಮ್ಮ ಕೆಲಸವೆಲ್ಲಾ ಮುಗಿಸಿ ಮಲಗಿ ಹತ್ತು ನಿಮಿಷವಾಗಿಲ್ಲ, ಯಾರೋ ಬಾಗಿಲು ತಟ್ಟಿದರು.

ಡಾಕ್ಟರು ಬಹಳ ನಿಯತ್ತಿನ ಮನುಷ್ಯ. ಬೇಸರ ಪಟ್ಟುಕೊಳ್ಳದೆ ಹೋಗಿ ತೆಗೆದರು. ಬಂದ ಮನುಷ್ಯ ಇವರ ಕಾಲು ಹಿಡಿದುಕೊಂಡು "ಸಾರ್, ಒಬ್ಬ ಗರ್ಭಿಣಿ ಹೆಂಗಸು ಬಹಳ ಪ್ರಸವವೇದನೆ ಅನುಭವಿಸುತ್ತಿದ್ದಾಳೆ ಸಾರ್. ಆಕೆಯನ್ನು ನೀವೇ ಕಾಪಾಡಬೇಕು ಸಾರ್. ದಯಮಾಡಿ ನೀವೇ ಬಂದು ಅವಳನ್ನು ಉಳಿಸಬೇಕು, ಆಗಲ್ಲ ಅನ್ನಬೇಡಿ ಸಾರ್" ಎಂದು ಅಲವತ್ತುಕೊಂಡ.

ಸುಮಾರು ೭೦ ವರ್ಷಗಳ ಕೆಳಗೆ ಮಹಾರಾಷ್ಟ್ರದ ಮೂಲೆಯಲ್ಲೊಂದು ಗ್ರಾಮದಲ್ಲಿನ ಡಾಕ್ಟರ್ ಅವರು. ತಕ್ಷಣ ಅವನೊಂದಿಗೆ ಹೊರಟರು.

ಆ ಹೆಂಗಸು ೧೯-೨೦ರ ವಯಸ್ಸಿನವಳಿದ್ದಿರಬೇಕು ಎಂದು ತಿಳಿಯಿತು. ಪ್ರಸವ ನಿಜಕ್ಕೂ ಕಷ್ಟದಾಯಕ ವಾಗಿತ್ತು ಆಕೆಗೆ. ಬೆಳಗಿನ ಜಾವವಾಗಿತ್ತು ಆಗ. ಆ ಹೆಂಗಸು ಡಾಕ್ಟರ ಕೈಹಿಡಿದುಕೊಂಡು "ಡಾಕ್ಟರ್ ಸಾಹೇಬರೇ, ನನ್ನ ಗಂಡ ನನ್ನ ಬಿಟ್ಟು ಹೋದ. ನಾನು ದಟ್ಟ ದಾರಿದ್ರ್ಯದಲ್ಲಿದ್ದೇನೆ. ನಾನು ಹುಟ್ಟುವ ಮಗುವನ್ನು ಸಾಕುವ ಸ್ಥಿತಿಯಲ್ಲಿ ಇಲ್ಲ. ನನ್ನನ್ನು ಉಳಿಸಬೇಡಿ. ಬೇಡಿಕೊಳ್ಳುತ್ತೇನೆ ನನ್ನನ್ನು ಸಾಯಿಸಿಬಿಡಿ. ಬದುಕಿ ಏನೂ ಉಪಯೋಗವಿಲ್ಲ".

ಡಾಕ್ಟರ್ ಗೇ ಮನಸ್ಸಿನಲ್ಲಿ ಕಸಿವಿಸಿಯಾಯಿತು. ಎಲ್ಲಾ ಪೇಷಂಟ್ ಗಳೂ 'ಹೇಗಾದರೂ ಮಾಡಿ ನನ್ನನ್ನು ಉಳಿಸಿ' ಎಂದು ಬೇಡಿಕೊಂಡರೆ ಈ ಅಸಹಾಯಕ ಹೆಂಗಸು ನನ್ನನ್ನು ಉಳಿಸಬೇಡಿ ಎಂದು ಬೇಡಿಕೊಳ್ಳುತ್ತಿದ್ದಾಳೆ. ಅಂದ ಮೇಲೆ ಅವಳಿಗೆ ಬದುಕು ಎಷ್ಟು ದುರ್ಭರವೆನಿಸಿರಬೇಡ, ಎನಿಸಿ ಹೇಳಿದರು "ನಾನು ಡಾಕ್ಟರ್ ಆಗಿ ನನಗೆ ಪೇಷಂಟ್ ಗಳನ್ನು ಉಳಿಸುವುದು ಮಾತ್ರ ಗೊತ್ತು ಹೊರತು ಸಾಯಿಸುವುದು ಗೊತ್ತಿಲ್ಲವಮ್ಮಾ. ನೀನು ಯೋಚನೆ ಮಾಡಬೇಡ. ಅದರ ವಿಚಾರ ಹೆರಿಗೆಯ ನಂತರ ನೋಡಿಕೊಳ್ಳೋಣ" ಎಂದು ಹೇಳಿ ಸಮಾಧಾನ ಪಡಿಸಿ ಪ್ರಸವದ ಕಾರ್ಯವನ್ನು ಮುಂದುವರೆಸಿದರು.

ಕೆಲವು ಗಂಟೆಗಳ ಕಾಲ ಪ್ರಯಾಸ ಪಟ್ಟಮೇಲೆ ಕೊನೆಗೆ ಹೆರಿಗೆಯಾಗಿ ಹೆಣ್ಣು ಮಗುವನ್ನು ಹೆತ್ತಳು. ಸಂತೋಷ ಪಡಬೇಕೋ ದುಃಖ ಪಡಬೇಕೋ ತಿಳಿಯದ ಸ್ಥಿತಿಯಲ್ಲಿದ್ದಳು ಆಕೆ.

ಡಾಕ್ಟರ್ ಹೊರಡಲು ಸಿದ್ದರಾಗುತ್ತಾ ಆಕೆಗೆ ಆಶ್ವಾಸನೆ ಕೊಟ್ಟರು " ನೀನು ಚಿಂತೆ ಮಾಡಬೇಡ ತಾಯಿ. ನಾನೇನು ಫೀಸ್ ತಗೋಳ್ತಾ ಇಲ್ಲ. ಬದಲು ನಾನೇ ನಿನಗೆ ಈ ನೂರು ರೂಪಾಯಿ ಕೊಡ್ತಿದ್ದೀನಿ ಇಟ್ಟುಕೋ.

ನಿನಗೆ ಯಾರೂ ಇಲ್ಲ ಅಂದುಕೋಬೇಡ. ನಾನಿದ್ದೀನಿ. ನೀನು ಸುಧಾರಿಸಿಕೊಂಡಮೇಲೆ ಹತ್ತಿರದ ಪುಣೆಗೆ ಹೋಗಿ ಅಲ್ಲಿನ ನರ್ಸಿಂಗ್ ಕಾಲೇಜಿನಲ್ಲಿ ಇಂಥ ಹೆಸರಿನ ಗುಮಾಸ್ತ ಒಬ್ಬರಿದ್ದಾರೆ, ಅವರಿಗೆ ಈ ಪತ್ರ ಕೊಡು. ನಿನಗೆ ಸಹಾಯ ಮಾಡುತ್ತಾರೆ."

ಡಾಕ್ಟರು ಏನೋ ಒಂದು ಸಂತೃಪ್ತಿಯಿಂದ ವಾಪಸ್ ಹೊರಟರು.

ಅವರು ಹೇಳಿದಂತೆ ಆಕೆ ಪುಣೆಗೆ ಹೋಗಿ ಆ ಗುಮಾಸ್ತೆಯನ್ನು ಭೇಟಿಯಾಗಿ ಡಾಕ್ಟರ್ ಕೊಟ್ಟ ಪತ್ರವನ್ನು ಕೊಟ್ಟಳು. ಆ ಪತ್ರ ಓದಿದ ಕೂಡಲೇ ಆತ ಆಕೆಯನ್ನು ನರ್ಸಿಂಗ್ ಟ್ರೈನಿಂಗ್ ಗೆ ಸೇರಿಸಿಕೊಂಡು ಹಾಸ್ಟೆಲ್ನಲ್ಲಿ ವಾಸಕ್ಕೂ ಅನುವು ಮಾಡಿಕೊಡುತ್ತಾರೆ. ೮ ತಿಂಗಳ ಟ್ರೈನಿಂಗ್ ಮುಗಿದ ನಂತರ ಉದ್ಯೋಗವನ್ನೂ ಕೊಡಿಸುತ್ತಾರೆ.

ಇಪ್ಪತ್ತೈದು ವರ್ಷಗಳು ಕಳೆದಿವೆ. ಆ ಡಾಕ್ಟರ್ ಈಗ ಮೆಡಿಕಲ್ ಕಾಲೇಜಿನಲ್ಲಿ ಸೀನಿಯರ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಒಂದು ಯೂನಿವರ್ಸಿಟಿಯವರು ತಮ್ಮ ಮೇಧಾವಿ ವಿದ್ಯಾರ್ಥಿಗಳಿಗೆ ಬಂಗಾರದ ಮೆಡಲ್ ಪ್ರಶಸ್ತಿಗಳನ್ನು ಪ್ರದಾನ ಮಾಡಲು ಇವರನ್ನು ಆಹ್ವಾನಿಸಿದ್ದಾರೆ. ಆ ಕಾರ್ಯಕ್ರಮ ಮುಗಿದ ನಂತರ 'ಚಂದ್ರಾ' ಹೆಸರಿನ ಒಬ್ಬ ಯುವತಿ ಬಂದು ಈ ಡಾಕ್ಟರ್ ರನ್ನು ಭೇಟಿಯಾಗಿ 'ಸರ್, ತಾವು ದಯವಿಟ್ಟು ನಮ್ಮ ಮನೆಗೆ ಬರಬೇಕು' ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಇನ್ಯಾವುದೇ ಡಾಕ್ಟರ್ ಆಗಿದ್ದರೆ ಸಾಧ್ಯವಿಲ್ಲ ಎಂದು ಹೊರಟು ಬಿಡುತ್ತಿದ್ದರೇನೋ. ಆದರೆ ಈತ ಸ್ವಲ್ಪ ಮೃದು ಮನಸ್ಸಿನವರು. ವಾಪಸ್ ಮನೆಗೆ ಹೋಗುವಾಗ ಹಾಗೇ ಈ ಹುಡುಗಿಯ ಮನೆಗೆ ಹೊಕ್ಕು ಹೋದರೇನಾಯ್ತು, ಎಂದುಕೊಂಡು ಆಗಲಿ ಎಂದೊಪ್ಪಿ ಅವಳ ಜೊತೆ ಹೊರಡುತ್ತಾರೆ.

ಅಲ್ಲಿ ಆ ಹುಡುಗಿಯ ತಾಯಿ ಟೀ ತಂದು ಕೊಡುತ್ತಾ ತನ್ನ ಪರಿಚಯ, ಊರು ಇತ್ಯಾದಿ ಹೇಳುವಾಗ ಡಾಕ್ಟರರ ಮನಸ್ಸು ತಾವು ಅದೇ ಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದ ದಿನಗಳನ್ನು ನೆನೆಯುತ್ತದೆ. ಅಷ್ಟರಲ್ಲಿ ಆ ಯುವತಿ ಡಾಕ್ಟರ್ ರ ಕಾಲು ಮುಟ್ಟಿ ನಮಸ್ಕಾರ ಮಾಡುತ್ತಾಳೆ. ಡಾಕ್ಟರಿಗೆ ಬಹಳ ಸಂಕೋಚವೆನಿಸಿ', ಯಾಕಮ್ಮ ನನಗೆ ನಮಸ್ಕಾರ ಮಾಡುತ್ತಿದ್ದೀಯ' ಎಂದು ಕೇಳಿದಾಗ ಅವಳ ತಾಯಿ ಹೇಳುತ್ತಾಳೆ 'ಡಾಕ್ಟರ್ ಸಾಹೇಬರೇ, ಅವತ್ತು ರಾತ್ರಿ ನನ್ನ ಗುಡಿಸಿಲಿಗೆ ಬಂದು ನನಗೆ ಹೆರಿಗೆ ಮಾಡಿಸಿದಿರಲ್ಲ, ನೆನಪಿದೆಯೇ. ಆಗ ಹುಟ್ಟಿದ ಹೆಣ್ಣು ಮಗುವೇ ಈ ಹುಡುಗಿ. ಅಂದು ನೀವು ನನಗೆ ತೋರಿಸಿದ ದಯೆಯಿಂದಾಗಿ ನಾನು ಆ ಮಗುವನ್ನು ಬೆಳೆಸಿ ದೊಡ್ಡವಳನ್ನಾಗಿ ಮಾಡಿ ಹೆಚ್ಚಿನ ವಿದ್ಯಾಭ್ಯಾಸ ಕೂಡಾ ಕೊಡಿಸಲಿಕ್ಕಾಯಿತು. ನೀವು ನನ್ನ ಪಾಲಿನ ದೇವರಾಗಿ ಬಂದು ನನ್ನನ್ನು ಕಾಪಾಡಿದಿರಿ. ನನ್ನ ಬದುಕಿಗೊಂದು ದಾರಿಮಾಡಿಕೊಟ್ಟಿರಿ. ಅದಕ್ಕೇ ಅವಳಿಗೆ ನಿಮ್ಮ ಹೆಸರನ್ನೇ ಇಟ್ಟಿದ್ದೇನೆ, 'ಚಂದ್ರಾ' ಅಂತ", ಎಂದು ಕಣ್ಣೊರೆಸಿಕೊಂಡಳು.

ಚಂದ್ರಾ ಹೇಳಿದಳು "ಇಷ್ಟರಲ್ಲೇ ನಾವು ಬಡವರಿಗಾಗಿ ಉಚಿತ ಆಸ್ಪತ್ರೆಯನ್ನು ಪ್ರಾರಂಭಿಸುತ್ತಿದ್ದೇವೆ. ಅದಕ್ಕೂನಿಮ್ಮ ಹೆಸರೇ ಇಡುತ್ತೇವೆ. ದಯಮಾಡಿ ಅದರ ಉದ್ಘಾಟನೆಗೆ ನೀವೇ ಬರಬೇಕು ಸರ್". ಅವಳ ಮಾತು ಡಾಕ್ಟರ ಕಣ್ಣಲ್ಲೂ ನೀರು ತರಿಸಿತು. ಆಗಲಿ ಎಂದು ತಲೆಯಾಡಿಸಿದರು.

ಆ ಡಾಕ್ಟರ್ ಯಾರಿರಬಹುದು ಗೊತ್ತೇ?

ಇನ್ಯಾರೂ ಅಲ್ಲ; ಡಾಕ್ಟರ್ ರಾಮಚಂದ್ರ ಕುಲಕರ್ಣಿ ಯವರು.

ಇನ್ಫೋಸಿಸ್ ಖ್ಯಾತಿಯ ಶ್ರೀಮತಿ ಸುಧಾ ಮೂರ್ತಿ ಯವರ ತಂದೆ. ಆಕೆಯೂ ತಂದೆಯ ಹೆಜ್ಜೆಗಳಲ್ಲೇ ಮುಂದುವರೆದು ಕರುಣಾಮಯಿ ಸಮಾಜ ಸೇವಕಿಯಾಗಿ ಸೇವೆ ಸಲ್ಲಿಸುತ್ತಿರುವ ವಿಷಯ ನೀವೆಲ್ಲಾ ಬಲ್ಲಿರಷ್ಟೇ. ಇಲ್ಲಿ 'ತಂದೆಯಂತೆ ಮಗಳು'.



# “ಕತೆ ಕಳುವಾಗಿದೆಯೇ?"

✍ **ಉಮಾ ರಾವ್**

ಎಂದಾದರೂ ನಿಮ್ಮ ಕತೆ ಕಳುವಾಗಿದೆಯೇ? ನಗುತ್ತೀರಾ? ಹೀಗೆ ಕೇಳಿದಾಗ ತುಂಬಾ ಜನ ನಿಮ್ಮಂತೆ ನಕ್ಕಿದ್ದಾರೆ.
"ಕತೆ ಕಳುವಾಗುವುದೆ? ಎಲ್ಲಾದರೂ ಕೇಳಿದ್ದೀರಾ?"
"ದುಡ್ಡೇ, ಕಾಸೆ, ತಿಂಡಿಯೇ, ತೀರ್ಥವೆ ಕತೆ ಯಾರ್ರೀ ಕದಿತಾರೆ?
"ನಮ್ಮ ದೇಶ ಉದ್ಧಾರವಾದ ಹಾಗೆ.... ಕತೆ ಕಳುವಾಗೋಕೆ ಶುರುವಾದ ದಿನ.." ಎಂದೆಲ್ಲಾ ಅಂದಿದ್ದಾರೆ. ಕೊನೆಗೆ ನನ್ನ ಆಪ್ತ ಗೆಳೆಯ ಗಿರೀಶನಂತೂ ಆ ಕತೆಯಲ್ಲಿ ಅಂತದ್ದೇನಿದೋ ಕಲುವಾಗೋಕೆ ಎಂದು ತಮಾಷೆ ಮಾಡಿದ್ದು ಉಂಟು ಆದರೆ ಅವನು ಹೇಳಿದ್ದರಲ್ಲೂ ಸತ್ಯವಿದೆ."
ನೋಡಿ, ನನ್ನ "ಸಂಜೆಗೆತ್ತಲು" ಓದಿದ್ದೀರಲ್ಲ, ಅದೇ ಆ 35 ವರ್ಷದ ಸಂತೃಪ್ತ ಗೃಹಿಣಿ, ಗಂಡ, 12 ವರ್ಷದ ಮಗಳೊಂದಿಗೆ ಸುಖವಾಗಿ ಸಂಚಾರ ಮಾಡಿಕೊಂಡಿದ್ದವಳು, ಒಂದು ದಿನ ತಟಕ್ಕನೆ ತನ್ನ ಪಕ್ಕದ ಮನೆಗೆ ಬಾಡಿಗೆಗೆ ಬಂದ 25 ವರ್ಷದ ಚಿತ್ರಕಾರನನ್ನು ಪ್ರೇಮಿಸಿ... ಆ ಕತೆ ಆಗಿದ್ದರೆ ಹಾದಿತಪ್ಪಿ ಮೈದುನನ ಕನಸಿನಲ್ಲಿ ಸಿಕ್ಕಿಬಿದ್ದ ನನ್ನ ಪಕ್ಕದ ಮನೆಯ ಶಾಂತ ರಾಘವ ಕೂಡ ಕದಿಯಬಹುದಿತ್ತು.
ಇನ್ನೂ ,"ತಲ್ಲಣ" 17 ವರ್ಷದ ಲೀನಾ ಮದುವೆ ಇಲ್ಲದೆ ಬಸುರಾಗಿ ಅಬಾರ್ಷನ್ ಮಾಡಿಸಿಕೊಳ್ಳಲು ಇಷ್ಟಪಡದೆ... ಇದಂತೂ ಸಾಮೀಪ್ಯಕ್ಕಾಗಿ ಸಂಜೆಗತ್ತಲಿನಲ್ಲಿ ಜೂಹು ಮರಳ ಮೊರೆಹೊಕ್ಕ ಒಂದು ಸಂಜೆ ನಾನೇ ಕಂಡ ಜೋಡಿಯೇ ಕದಿಯುವುದು ಸಾಧ್ಯವಿತ್ತು. ಮತ್ತೆ "ಎತ್ತರ?" ಒಬ್ಬ ಅತೀವ ಮಹತ್ವಾಕಾಂಕ್ಷೆಯುಳ್ಳ ಮನುಷ್ಯ, ಕೆಲಸದ ಮೇಲೆ ಕೆಲಸ ಬಿಡುತ್ತಾ ಕಾರ್ಪೊರೇಟ್ ಲ್ಯಾಡರ್ ಹತ್ತುತ್ತಾ ಹೋಗಿ, ಕೊನೆಗೆ ಅನುಭವಿಸುವ ತಲೆ ತಿರುಗು... ಅದನ್ನೋ... ಇತ್ತೀಚೆಗೆ ಕಾರಣವಿಲ್ಲದೆ ಬೆಚ್ಚಿ ಬೀಳುವ ಶರ್ಮ ಇಂಟರ್ನ್ಯಾಷನಲ್ ಚೀಫ್ ಎಕ್ಸಿಕ್ಯೂಟಿವ್ ಲಾಲ್ ವಾನಿಯೇ ಕಳ್ಳತನ ಮಾಡಬಹುದಿತ್ತು.
ಇನ್ನು "ಸಾಮಿಪ್ಯ?" ಎಷ್ಟೋ ಪತ್ರಿಕೆಯವರು ಅದನ್ನು ಅಚ್ಚು ಹಾಕಲೂ ಹಿಂಜರಿದಿದ್ದರು. ಗೆಳೆಯರೆಲ್ಲ xxx ಕತೆ ಹೇಳು ಎನ್ನುತ್ತಿದ್ದೀರಲ್ಲಾ... ಹಾದಿಯಲ್ಲಿ ಕಂಡ ಹೆಣ್ಣುಗಳನ್ನು ನಗ್ನರಾಗಿಸಿ ಮನಸ್ಸಿನಲ್ಲೇ ಮಂಡಿಗೆ ಹೊಡೆಯುವ ಯಾವ ಬೀದಿ ಕಾಮಣ್ಣನೂ ಹಾರಿಸಬಹುದಿತ್ತು ಅದನ್ನು.
ಆಮೇಲೆ "ಎಲ್ಲಿಂದ?" ಆ ಸಣ್ಣ ಹುಡುಗ ರೈಲ್ವೆ ಕಂಬಿಯ ಪಕ್ಕದಲ್ಲಿ ಕೂತು ದಿನಾ ನೇರಳೆ ಹಣ್ಣು ಮಾರುತ್ತಾ ತನ್ನಮ್ಮನನ್ನು ನೋಡಿಕೊಳ್ಳುತ್ತಾ.... ಹೊಟ್ಟೆಪಾಡಿಗಾಗಿ ಮುಂಬೈನ ದಿಕೆಟ್ಟ ಪ್ರವಾಹದಲ್ಲಿ ಚುಕ್ಕಾಣಿಯಿಲ್ಲದ ದೋಣಿಯೊಳಗೆ ಹಸುಗೂಸನ್ನು ತೇಲಿ ಬಿಟ್ಟ ಯಾವ ತಾಯಿಯು ಕದಿಯಬಹುದಿತ್ತು ಅದನ್ನು.
ಏಕೆ ಹೇಳಿದೆ ಅಂದ್ರೆ, ಇದರಲ್ಲಿ ಯಾವುದಾದರೂ ಕಳುವಾಗಿದ್ದರೆ ಗಿರೀಶ ಹೇಳಿದಂತೆ ಸ್ವಲ್ಪವಾದರೂ ಅರ್ಥವಿರುತ್ತಿತ್ತು. ಆದರೆ ಈ ಕತೆ ಗಿರೀಶನೇ ಮೊದಲ ಬಾರಿ ಕೇಳಿದಾಗ ಹೇಳಿದ್ದನಲ್ಲ,"ಅಲ್ವೋ, ಇದರಲ್ಲಿ ಒಬ್ಬ ಮುದುಕ ಪ್ರತಿದಿನ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ 26 ವರ್ಷಗಳ ಕಾಲ, ಎಂದೋ ದೋಣಿಯಲ್ಲಿ ತೇಲಿ ಹೋಗಿ, ಮರಳಿ ಬರದ ಮೊಮ್ಮಗನಿಗಾಗಿ ಕಾದಿರುತ್ತಾನೆ. ಸುಮ್ಮನೆ ಕಾದಿರುತ್ತಾನೆ. ಇದೆಂಥ ಕತೆಯೋ ಇದನ್ನು ಯಾರು ಓದುತ್ತಾರೆ" ಅದಕ್ಕೆ ಈಗ ಗಿರೀಶ ನಗುತ್ತಾ "ಆ ಕತೆಯೇ ಇಂಪಾಸಿಬಲ್...... ಐ ಡೋಂಟ್ ನೋ ವಾಟ್ ಮೇಡ್ ಯು ರೈಟ್ ಇಟ್... ಇನ್ನೂ ಅದು ಕಳವಾಗೋದು...." ಎಂದು ನಗುತ್ತಲೇ ಇದ್ದ. ಅವನಿಗೆ ಅರ್ಥವಾಗಿರಲೆ ಇಲ್ಲ, ಅದು ನನ್ನ ಹೃದಯಕ್ಕೆ ಹತ್ತಿರದ, ಅಚ್ಚುಮೆಚ್ಚಿನ ಕತೆಯೆಂದು ಏಕೋ ನಾನು ಬರೆದು ಮುಗಿಸಿದ ಮೇಲೂ ನನ್ನನ್ನು ಬಿಟ್ಟು ಹೋಗಿರಲೇ ಇಲ್ಲವೆಂದು....
ಆದರೆ ನನ್ನ ಆ ಕತೆ ಕಳುವಾದದ್ದು ನಿಜ. ನಿನ್ನೆ ಸಂಜೆ ಜುಹೂ ಬೀಚಿಗೆ ಸೂರ್ಯಸ್ತ ನೋಡಲು ಹೋಗಿದ್ದಾಗ. ಅಲ್ಲೇ ಕಳುವೇ ಆಯ್ತೆಂದು ಹೇಗೆ ಗೊತ್ತು ಅನ್ನುತ್ತೀರಾ ನೋಡಿ. ನಾನು ನನ್ನ ರೂಮಿನಿಂದ ಮಧ್ಯಾಹ್ನ ಮೂರೂವರೆಗೆ ಹೊರಟೆ, ಹತ್ತಿರವೇ ಇದ್ದ ಹೋಟೆಲ್ ಪರಾಗ್ ಗೆ ಚಾಯ್ ಕುಡಿಯಲು ಹೋಗಿದ್ದೆ. ದಿನ ಹೋಗ್ತೀನಿ ಅಲ್ಲಿ. ನನ್ನ ಮರೆವು ಅವನಿಗೆ ಚೆನ್ನಾಗಿ ಗೊತ್ತು. ಬೇರೆ ಬೇರೆ ಸಂದರ್ಭದಲ್ಲಿ ಛತ್ರಿ, ಬಾಲ್ ಪೆನ್, ಕಲ್ಲಂಗಡಿ ಹಣ್ಣು, ಶೇವಿಂಗ್ ಕ್ರೀಮ್ ಇತ್ಯಾದಿ ಅಲ್ಲಿ ಮರೆತು ಹೋದದ್ದುಂಟು, ಅವನು ಅದನ್ನೆತ್ತಿಟ್ಟು ತಪ್ಪದೇ ನನಗೆ ಕೊಡುತ್ತಾನೆ. ದಿನಾ ನಾನು ಎದ್ದು ಹೋದ ತಕ್ಷಣ ಏನೂ ಮರೆತಿಲ್ಲ ತಾನೇ ಎಂದು ನೋಡಿಕೊಳ್ಳುತ್ತಾನೋ ಏನೋ! ಮತ್ತೆ ನಿನ್ನೆ ಅಲ್ಲಿಂದ ಜೈ ಮಹಾರಾಷ್ಟ್ರ ಸ್ಟೇಷನರಿ ಮಾರ್ಟಿಗೆ ಹೋದಾಗ, ನನ್ನ ಚೀಲ ನನ್ನೊಂದಿಗೆ ಇತ್ತು. ಅದರಲ್ಲಿ ಕತೆಯೂ ಇತ್ತು ಏಕೆಂದರೆ ಅಲ್ಲಿ ಸ್ಕ್ರಿಬ್ಲಿಂಗ್ ಪ್ಯಾಡ್ ಗಳನ್ನು ಕೊಂಡಾದ ಮೇಲೆ ಚೀಲದ ಬುಡದಲ್ಲಿ ಕತೆಯನ್ನು ಓರಣವಾಗಿಟ್ಟು ಅದರ ಮೇಲೆ ಅವನ್ನು ಹೇಳಿದ್ದು ಚೆನ್ನಾಗಿ ನೆನಪಿದೆ. ಅಲ್ಲಿಂದ ಬಸ್ ಸ್ಟಾಪಿನತ್ತ ನಡೆಯುತ್ತಾ ದಾರಿಯಲ್ಲಿ ಹೂ ಮಾರುವವಳ ಹತ್ತಿರ ಗಜರಾ ಕೊಂಡಿದ್ದೆ. ಇದು ನನ್ನ ಒಂದು ವಿಚಿತ್ರ ಹುಚ್ಚು. ಪ್ರತಿ ಸಲ ಕಡಲ ಕಡೆ ಹೋಗುವಾಗ, ಅಲ್ಲಿ ನನಗೆ ಸಿಗಬಹುದಾದ ಯಾವುದೋ ಹುಡುಗಿಗೋಸ್ಕರ ಮಲ್ಲಿಗೆ ಮಾರಲೆ ಕೊಳ್ಳುವುದು, ರಾತ್ರಿ ಮರಳಿ ಬಂದು ದಿಂಬಿನ ಪಕ್ಕ ಅದನ್ನು ಇಟ್ಟು ಮಲಗುವುದು, ಬೆಳಗಾಗೆದ್ದು ಅದು ಹಾಗೆ ಬಾಡಿರುವುದನ್ನು ನೋಡಿ, ನೋವು ಜೊತೆಗೆ ಒಂದು ರೀತಿಯ ಬಿಡುಗಡೆಯ ಸುಖ ಎರಡನ್ನು ಅನುಭವಿಸುವುದು. ಅದಾದ ನಂತರ ಸೀದಾ ಬಸ್ ಹಿಡಿದು ಪ್ಯಾಕೆಟ್ ಚೀಲ ಹರಿದಿರಲಿಲ್ಲ ಯಾರು ಚೀಲದ ಬುಡದವರೆಗೂ ಕೈ ಹಾಕಿ ಬರಿಯ ಕತೆ ಕದಿಯುತ್ತಾರೆ?
ಜುಹೂ ಬೀಚ್ ತಲುಪಿದ ಮೇಲೆ ಎಷ್ಟೋ ಹೊತ್ತು ಮೌನವಾಗಿ ಮರಳ ಮೇಲೆ ಓಡಾಡಿದ್ದೆ. ಕಡಲಲ್ಲಿ ಕರಗುತ್ತಿದ್ದ ಸೂರ್ಯನನ್ನೇ ನೋಡುತ್ತಾ ನಿಂತಿದ್ದೆ. ಎಂದಿನಂತೆಯೇ ಆ ಕ್ಷಣ ಬದುಕಿನ ವ್ಯವಹಾರಗಳೆಲ್ಲ ಕ್ಷುಲ್ಲಕವೆನಿಸಿತ್ತು. ನಂತರ ಒದ್ದೆಯಾಗಿ ಬಟ್ಟೆ ಮೈಗಟ್ಟಿಕೊಂಡ ಹೆಣ್ಣುಗಳ ಮೈಮಾಟ, ಆಕರ್ಷಕ ಕಾಲುಗಳನ್ನು ನೋಡುತ್ತಾ ಸ್ವಲ್ಪ ಹೊತ್ತು ಕಳೆದಿದ್ದೆ. ಮತ್ತೆ ಬೇಲ್ ಪುರಿ, ಪಾನಿಪುರಿ ತಿಂದು ಕಬ್ಬಿನ ರಸ ಕುಡಿದು ತೃಪ್ತನಾಗಿ ಬಂದು ಮರಳ ಮೇಲೆ ಕುಳಿತಿದ್ದೆ. ನಾನು ಕುಳಿತಿದ್ದ ಸ್ಥಳವು ಚೆನ್ನಾಗಿ ನೆನಪಿದೆ. ಆ ಮಕ್ಕಳ ಮೇರಿ -ಗೋ -ರೌಂಡ್ ನಿಂದ ಸ್ವಲ್ಪ ದೂರ ರಾಧಾಕೃಷ್ಣ ಸ್ಪೆಷಲ್ ಬೇಲ್ ವಾಲಾ ಗಾಡಿಯ ಹಿಂದೆ, ಒಂಟೆಗಳ ಹತ್ತಿರ. ಆ ಕ್ಷಣ ನಾನು ಆ ವಾತಾವರಣದಲ್ಲಿ ನನ್ನ ಕತೆಯನ್ನು ಓದಿ ನೋಡಬೇಕೆಂದು ಅಲ್ಲಿಗೆ ಬಂದದ್ದು ಮರೆತೇ ಹೋಗಿತ್ತು. ನನ್ನ ಹಿಂದೆ ಕುಳಿತಿದ್ದ ಎಳೆ ಪ್ರೇಮಿಗಳು ಸಂಜೆಗತ್ತಲೆಯಿಂದ ಧೈರ್ಯ ಪಡೆದು ಜಗತ್ತನ್ನು

ಮರೆತಿದ್ದರು. ಅದೇ ಸಂಜೆಗತ್ತಲಿನಿಂದ ನಾನು ಧೈರ್ಯ ಪಡೆದು ಅವರನ್ನು ಕದ್ದು ಕದ್ದು ನೋಡುತ್ತಿದ್ದೆ. ಆಗ ನನ್ನ ರಸಭಂಗ ಮಾಡಲೆಂದೇ ಎಂಬಂತೆ ಎದುರಿಗೆ ಪ್ರತ್ಯಕ್ಷನಾಗಿದ್ದ ನಾರಾಯಣ. ಅವನನ್ನು ನೋಡಿ ಎಷ್ಟು ವರ್ಷಗಳಾಗಿತ್ತು. ಐದು, ಆರು? ನೆನಪಿಲ್ಲ ಮುಂಬೈನ ಪ್ಯಾಕೇಜ್ ಟೂರಿನಂತಹ ಬದುಕಲ್ಲಿ ಒಂದಾಗಿ ಅವನ ಮುಖ ಲವಲವಿಕೆ ಕಳೆದುಕೊಂಡಿತ್ತು. ಮಾತು ಮಾತಿಗೂ ನಗುತ್ತಾ ಪ್ರಾಕ್ಟಿಕಲ್ ಜೋಕ್ಸ್ ಮಾಡುತ್ತಾ ದಿನ ಕಳೆದು ರಾತ್ರಿ ಮುಕೇಶನ ಹಾಡು ಕೇಳುತ್ತಾ ಕಣ್ಣು ತೇವ ಮಾಡಿಕೊಳ್ಳುವ ನಾರಾಯಣನೆಲ್ಲಿ? ಆಂಟಿಸೆಪ್ಟಿಕ್ ಆಗಿ, ಹಲೋ... ವಾಟ್ ಎ ಸರ್ಪ್ರೈಸ್..." ಎಂದು ಕೈ ಕುಲುಕುವ ನಾರಾಯಣನೆಲ್ಲಿ? ಅದೇಕೋ ಅವನಿಗೂ ನಾನು ಸಿಕ್ಕಿದ್ದು ಬೇಡಾಗಿತ್ತೆನಿಸಿತ್ತು. ಆದರೂ ಇಬ್ಬರು ಒಬ್ಬರನ್ನೊಬ್ಬರು ಕಂಡು ತುಂಬಾ ಖುಷಿಯಾದಂತೆ ಮಾತಾಡಿಕೊಂಡೆವು. ಮೈಲಿಗಲ್ಲುಗಳನ್ನು ಹೋಲಿಸಿಕೊಂಡೆವು. ಪಿಸ್ತಾ ಕುಲ್ಫಿ ತಿಂದೆವು. ಹಣ ಕೊಡಲು ಜೇಬಿನಿಂದ ಪರ್ಸ್ ತೆಗೆದ ನಾರಾಯಣನ ಹತ್ತಿರವಿದ್ದ ನೋಟಿನ ಕಂತೆ ನೋಡಿ ಹೆದರಿದ್ದೆ. ನಿನ್ನನ್ನು ಮನೆಯ ಹತ್ತಿರ ಬಿಟ್ಟು ಹೋಗುತ್ತೇನೆ ಎಂದಿದ್ದ. ಟ್ಯಾಕ್ಸಿ ಹತ್ತಿ ... ಹಾಂ! ಆಗಲೇ ನಾರಾಯಣ ಗಡಿಬಿಡಿಯಲ್ಲಿ ತನ್ನ ಚೀಲ ಬೀಚ್ ಮೇಲೆ ಮರೆತು ಬಂದಿರಬೇಕು. ಆದರೆ ಅದು ನೆನಪಾದದ್ದು ಯಾವಾಗ? ರೂಮಿಗೆ ಬಂದು ಬಟ್ಟೆ ಬದಲಾಯಿಸಿ ಮಲಗುವ ತಯಾರಿ ಮಾಡಿಕೊಳ್ಳತೊಡಗಿದಾಗ ರಾತ್ರಿ 11:00 ಗಂಟೆ... ಆಗ ಜೂಹುಗೆ ಹೋಗುವುದು ಹೇಗೆ? ನನ್ನ ಅದೃಷ್ಟವಿದ್ದಂತಾಗಲಿ, ನಾಳೆ ಬೆಳಿಗ್ಗೆ ಹೋಗೋಣ ಎಂದುಕೊಂಡು ಮಲಗಿಕೊಂಡೆ. ರಾತ್ರಿಯೆಲ್ಲ ನಿದ್ದೆ ಬರಲಿಲ್ಲ. ಏನೋ ತಳಮಳ ಬೆಳಗ್ಗೆ ಐದು ಗಂಟೆಗೆ ಅಲಾರ್ಮ್ ಇಟ್ಟು ಮಲಗಿದೆ. ಅದು ಹೊಡೆಯುವ ಮುಂಚೆಯೇ ಎಚ್ಚರವಾಗಿದ್ದರೂ ಕಾದು, ಅದು ಟ್ರಿಣ್ ಅನ್ನುತ್ತಲೇ ಗಡಿಬಿಡಿಯಿಂದ ಎದ್ದು ಹಲ್ಲುಜ್ಜಿ, ಬಟ್ಟೆ ಬದಲಿಸಿ, ಪರಾಗ್ ಗೆ ಹೋಗಿ ಚಾಯ್ ಕುಡಿದು ಹೊಸ ದಿನದ ಉತ್ಸಾಹದಿಂದ ಹಗುರವಾಗಿ ಓಡುತ್ತಿದ್ದ ಅರೆ ಬರೆ ಕಾಲಿ ಕೆಂಪು ಬಸ್ಸು ಹಿಡಿದು ಜೂಹು ತಲುಪಿದೆ.

ಬೆಳಗಿನಲ್ಲಿ ಜೂಹು ಬೇರೆ ರೀತಿಯೇ ಕಾಣುತ್ತಿತ್ತು.

